ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ಕನ್ನಡ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಾಧಿಪತಿಗಳೂ ಆಗಿರುವ ಸನ್ಮಾನ್ಯ ಶ್ರೀ ಹನ್ಸ್‌ರಾಜ ಭಾರದ್ವಾಜ್ ಅವರೆ, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು ಹಾಗೂ ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ ಶ್ರೀ ಆರ್.ವಿ.ದೇಶಪಾಂಡೆಯವರೆ, ಕರ್ನಾಟಕದ ಶ್ರೇಷ್ಠ ಬರಹಗಾರರು ಹಾಗೂ ಪರಿಸರಪ್ರೇಮಿಗಳೂ ಆದ ಸನ್ಮಾನ್ಯ ಶ್ರೀ ನಾಗೇಶ ಹೆಗಡೆಯವರೆ, ನಾಡೋಜ ಗೌರವ ಪದವಿಗಳನ್ನು ಸ್ವೀಕರಿಸಲು ದಯಮಾಡಿಸಿರುವ ಸನ್ಮಾನ್ಯ ಶ್ರೀ ಕೋ. ಚೆನ್ನಬಸಪ್ಪ ಅವರೆ, ನ್ಯಾಯಮೂರ್ತಿ ಸಂತೋಷ್ ಹೆಗಡೆ ಅವರೆ, ಶ್ರೀ ಎಸ್.ಕೆ. ಶಿವಕುಮಾರ್ ಅವರೆ, ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿ ಸದಸ್ಯರೆ, ವಿವಿಧ ಮಾಧ್ಯಮಗಳ ಮಿತ್ರರೆ, ಕನ್ನಡ ವಿಶ್ವವಿದ್ಯಾಲಯದ ಎಲ್ಲಾ ಸಹೋದ್ಯೋಗಿಗಳೇ ವಿವಿಧ ಪದವಿಗಳನ್ನು ಸ್ವೀಕರಿಸಲು ಬಂದಿರುವ ಸಂಶೋಧಕರೆ, ಆಹ್ವಾನಿತರೆ ಮತ್ತು ಸಭಿಕರೆ,

ಕನ್ನಡ ವಿಶ್ವವಿದ್ಯಾಲಯದ ೨೨ನೇ ನುಡಿಹಬ್ಬಕ್ಕೆ ತಮ್ಮೆಲ್ಲರನ್ನು ವಿಶ್ವಾಸದಿಂದ ಮತ್ತು ತುಂಬುಗೌರವದಿಂದ ಸ್ವಾಗತಿಸಲು ಇಷ್ಟಪಡುತ್ತೇನೆ. ಭಾರತದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರಾಗಿರುವ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳು ಘನತೆವೆತ್ತ ರಾಜ್ಯಪಾಲರು ನುಡಿಹಬ್ಬದ ಅಧ್ಯಕ್ಷತೆಯನ್ನು ವಹಿಸಿಕೊಂಡು ೩ ಜನ ಗಣ್ಯರಿಗೆ ನಾಡೋಜ ಗೌರವ ಪದವಿಗಳನ್ನು ನೀಡಲು ಒಪ್ಪಿ ಆಗಮಿಸಿದ್ದಾರೆ. ಸನ್ಮಾನ್ಯ ಕುಲಾಧಿಪತಿಗಳ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯವು ಸುಗಮವಾಗಿ ಮುನ್ನಡೆಯುತ್ತಿದೆ. ಅವರನ್ನು ಕನ್ನಡ ವಿಶ್ವವಿದ್ಯಾಲಯದ ಪರವಾಗಿ ಗೌರವಪೂರ್ವಕವಾಗಿ ಸ್ವಾಗತಿಸುತ್ತೇನೆ.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರು, ಕನ್ನಡ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಸನ್ಮಾನ್ಯ **ಶ್ರೀ ಆರ್.ವಿ.ದೇಶಪಾಂಡೆ ಅವರು** ಅತ್ಯಂತ ಕ್ರಿಯಾಶೀಲ ಮನಸ್ಸಿನ ಸಾಂಸ್ಕೃತಿಕ ಚಿಂತಕರು. ಕನ್ನಡ ವಿಶ್ವವಿದ್ಯಾಲಯದ ಈ ೨೨ನೇ ನುಡಿಹಬ್ಬದಲ್ಲಿ ಪಿಎಚ್.ಡಿ. ಪದವಿಗಳನ್ನು ಪ್ರದಾನ ಮಾಡಲು ಒಪ್ಪಿ ಅವರು ಆಗಮಿಸಿದ್ದಾರೆ. ಅವರನ್ನು ಅತ್ಯಂತ ಗೌರವ ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

ಕನ್ನಡ ವಿಶ್ವವಿದ್ಯಾಲಯದ ೨೨ನೇ ನುಡಿಹಬ್ಬದ ಈ ಘಟಿಕೋತ್ಸವ ಭಾಷಣವನ್ನು ಮಾಡಲು ಕರ್ನಾಟಕದ ಶ್ರೇಷ್ಠ ಬರಹಗಾರರು ಹಾಗೂ ಪರಿಸರಪ್ರೇಮಿಗಳೂ ಆದ ಶ್ರೀ ನಾಗೇಶ ಹೆಗಡೆ ಅವರು ಆಗಮಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಮೊದಲಿನಿಂದಲು ಅಪಾರವಾದ ಪ್ರೀತಿ ಮತ್ತು ಕಾಳಜಿಯನ್ನು ಇಟ್ಟುಕೊಂಡಿರುವ ಶ್ರೀ ನಾಗೇಶ ಹೆಗಡೆ ಅವರು ಆರಂಭದಿಂದಲೂ ಸಲಹೆ ಮತ್ತು ಸಹಕಾರವನ್ನು ನೀಡುತ್ತಾ ಬಂದಿದ್ದಾರೆ. ಮುಂದಿನ ದಿನಮಾನಗಳಲ್ಲಿ ಕೂಡ ವಿಶ್ವವಿದ್ಯಾಲಯವನ್ನು ಬೆಳೆಸುವ ನಿಟ್ಟಿನಲ್ಲಿ ಅವರ ಸಲಹೆ ಸಹಕಾರವನ್ನು ಪಡೆದು ವಿಜ್ಞಾನ ಮತ್ತು ಪರಿಸರ ಯೋಜನೆಗಳನ್ನು ಹಮ್ಮಿಕೊಳ್ಳುವುದು ಕನ್ನಡ ವಿಶ್ವವಿದ್ಯಾಲಯದ ಆಶಯ. ಇಂತಹ ಒಬ್ಬ ಮೇಧಾವಿ, ಪರಿಸರಪ್ರೇಮಿ ನುಡಿಹಬ್ಬದ ಭಾಷಣ ಮಾಡಲು ಒಪ್ಪಿ ಬಂದಿರುವುದು ಸಂತೋಷದ ಸಂಗತಿ. ಅವರನ್ನು ಹೃದಯಪೂರ್ವಕವಾಗಿ ಸ್ವಾಗತಿಸುತ್ತೇನೆ.

ಕರ್ನಾಟಕದ ಏಕೀಕರಣದಲ್ಲಿ ಮಹತ್ತರ ಪಾತ್ರ ವಹಿಸಿ, ಇಂದಿಗೂ ನಾಡು, ನುಡಿಯ ರಕ್ಷಣೆಗಾಗಿ ಟೊಂಕ ಕಟ್ಟಿದವರು, ನ್ಯಾಯಾಲಯದಲ್ಲಿ ಕನ್ನಡ ಬಳಕೆಯ ಬಗೆಗೆ ವಿಶೇಷ ಆಸಕ್ತಿವಹಿಸಿ ಕನ್ನಡದಲ್ಲಿ ತೀರ್ಪುಗಳನ್ನು ಬರೆದವರು, ಮಹತ್ವದ ಕೃತಿಗಳನ್ನು ರಚಿಸಿದವರು ಆದ ಸನ್ಮಾನ್ಯ ಶ್ರೀ ಕೋ.ಚೆನ್ನಬಸಪ್ಪ ಅವರು ನಮ್ಮ ಆಹ್ವಾನವನ್ನು ಒಪ್ಪಿ ಇಂದು ನಾಡೋಜ ಗೌರವ ಪದವಿಯನ್ನು ಸ್ವೀಕರಿಸಲು ಆಗಮಿಸಿದ್ದಾರೆ. ಅವರನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.

ನ್ಯಾಯಾಂಗ ಚೌಕಟ್ಟಿನೊಳಗೆ ಭ್ರಷ್ಟಾಚಾರದ ವಿರುದ್ಧ ನಿಷ್ಪಕ್ಷಪಾತ ಮತ್ತು ನಿಷ್ಠುರ ಕ್ರಮವಹಿಸುವ ಮೂಲಕ ಜನ ಸಾಮಾನ್ಯರಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸಿದ ಮತ್ತು ನ್ಯಾಯಕ್ಕಾಗಿ ನಿರಂತರ ಹೋರಾಟವನ್ನು ಮುಂದುವರಿಸಿದ ನ್ಯಾಯಮೂರ್ತಿ ಸಂತೋಷ್ ಹೆಗಡೆ ಅವರು ಇಂದು ನಾಡೋಜ ಗೌರವ ಪದವಿಯನ್ನು ಸ್ವೀಕರಿಸಲು ಆಗಮಿಸಿದ್ದಾರೆ. ಅವರ ಉಪಸ್ಥಿತಿ ನಮ್ಮೆಲ್ಲರಿಗೆ ಹೆಮ್ಮೆ ಮತ್ತು ಸಂತೋಷವನ್ನು ತಂದುಕೊಟ್ಟಿದೆ. ಅವರನ್ನು ತುಂಬುಹೃದಯದಿಂದ ಸ್ವಾಗತಿಸುತ್ತೇನೆ.

ಇಸ್ರೋ ಉಪಗ್ರಹ ಚಾಲನಾ ಸಂಸ್ಥೆಯ ನಿರ್ದೇಶಕರಾಗಿ ಭಾರತದ ಬಾಹ್ಯಾಕಾಶ ಯೋಜನೆಗೆ ಸಂಬಂಧಿಸಿದಂತೆ ಉಪಗ್ರಹಗಳ ವಿನ್ಯಾಸ, ಅಭಿವೃದ್ಧಿ ಮತ್ತು ತಯಾರಿಕೆಯಲ್ಲಿ ತೊಡಗಿಕೊಂಡಿರುವ ವಿಜ್ಞಾನಿಗಳ ತಂಡದ ನೇತೃತ್ವವನ್ನು ವಹಿಸಿರುವ, ಕನ್ನಡದ ಪ್ರಸಿದ್ಧ ವಿಜ್ಞಾನಿ ಸನ್ಮಾನ್ಯ ಶ್ರೀ ಎಸ್.ಕೆ.ಶಿವಕುಮಾರ್ ಅವರು ನಮ್ಮ ಆಹ್ವಾನವನ್ನು ಒಪ್ಪಿ ಇಂದು ನಾಡೋಜ ಗೌರವ ಪದವಿಯನ್ನು ಸ್ವೀಕರಿಸಲು ಆಗಮಿಸಿದ್ದಾರೆ. ಅವರನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿ ಹಾಗೂ ಆಡಳಿತ ಮಂಡಳಿ ಸದಸ್ಯರನ್ನು, ವಿವಿಧ ಮಾಧ್ಯಮಗಳ ಸ್ನೇಹಿತರನ್ನು ವಿಶ್ವವಿದ್ಯಾಲಯದ ನನ್ನ ಎಲ್ಲಾ ಸಹೋದ್ಯೋಗಿಗಳನ್ನು, ಪದವಿ ಪಡೆಯುವ ವಿದ್ಯಾರ್ಥಿಗಳನ್ನು ಮತ್ತು ಸಭಿಕರನ್ನು ಪ್ರೀತಿಯಿಂದ ಸ್ವಾಗತಿಸುತ್ತಾ ಮತ್ತೊಮ್ಮೆ ಬರಮಾಡಿಕೊಳ್ಳಬಯಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ಇದೀಗ ೨೨ನೇ ವರ್ಷ. ಹಿರಿಯ ಕವಿ ಮತ್ತು ಚಿಂತಕ ಡಾ.ಚಂದ್ರಶೇಖರ ಕಂಬಾರರ ನೇತೃತ್ವದಲ್ಲಿ ಆರಂಭಗೊಂಡ ಕನ್ನಡ ವಿಶ್ವವಿದ್ಯಾಲಯವು ಅವಿರತವಾಗಿ ಕನ್ನಡದ ಕೈಂಕರ್ಯವನ್ನು ಕೈಗೊಳ್ಳುತ್ತಾ ಬಂದಿದೆ. ನಾವು ಇದುವರೆಗೆ ಮಾಡಿರುವ ಕೆಲಸ ಕನ್ನಡ ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆಯಾದರೂ ನಾವು ಮಾಡಬೇಕಾದ ಕೆಲಸ ಬಹಳಷ್ಟಿದೆ ಎಂಬ ಎಚ್ಚರವೂ ನಮಗಿದೆ. ಕಳೆದ ವರ್ಷ ನುಡಿಹಬ್ಬದ ಸಂದರ್ಭದಲ್ಲಿ ಕುಲಪತಿಯಾಗಿ ನಾನು ಆಡಿದ ಮಾತುಗಳನ್ನೇ ಪುನರಾವರ್ತಿಸಿ ಹೇಳುವುದಾದರೆ "ಜಾಗತೀಕರಣ ಮತ್ತು ಉದಾರೀಕರಣಗಳ ಅನಿವಾರ್ಯ ಅಪ್ಪುಗೆಯ ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪಾತ್ರ ಏನು ಎಂಬುದನ್ನು ನಾವು ಮತ್ತೆ ಮತ್ತೆ ವಿವೇಚಿಸಿಕೊಳ್ಳಬೇಕಾಗಿದೆ. ಕನ್ನಡವನ್ನು ಕಟ್ಟಿ ಬೆಳೆಸುವ ದೃಷ್ಟಿಯಿಂದ, ಕನ್ನಡ ಸಂಸ್ಕೃತಿಯನ್ನು ವ್ಯಾಖ್ಯಾನಿಸುವ ದೃಷ್ಟಿಯಿಂದ, ವಿಜ್ಞಾನ ಮತ್ತು ಸಮಾಜವಿಜ್ಞಾನ ಕ್ಷೇತ್ರಗಳಲ್ಲಿ ಕನ್ನಡವನ್ನು ಅಧಿಕೃತವಾಗಿ ಬೆಳೆಸಬೇಕಾದ ದೃಷ್ಟಿಯಿಂದ ನಾವು ಎಷ್ಟು ಶ್ರಮ ಹಾಕಿದರೂ ಸಾಲದೆಂಬ ಪರಿಸ್ಥಿತಿ ಉದ್ಭವವಾಗಿದೆ. ಆಧುನಿಕತೆಯ ನಾಗಾಲೋಟದಲ್ಲಿ ತೃತಿಯ ಜಗತ್ತಿನ ಅನೇಕ ಭಾಷೆ ಮತ್ತು ಸಂಸ್ಕೃತಿಗಳು ಆತಂಕದ ಪರಿಸ್ಥಿತಿಯನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯದ ಜವಾಬ್ದಾರಿ ಅತ್ಯಂತ ಹೆಚ್ಚಿನದಾಗಿದೆ. ಈ ಹಿನ್ನೆಲೆಯಲ್ಲಿ ನಿರ್ಲಕ್ಷಕ್ಕೆ ಒಳಗಾಗುತ್ತಿರುವ ಭಾಷೆ ಮತ್ತು ದೇಶಿ ಸಂಸ್ಕೃತಿಯನ್ನು ಸಮೃದ್ಧಗೊಳಿಸುವ ಹಾಗೂ ಆಧುನಿಕ ಸವಾಲುಗಳಿಗೆ ಮುಖಾಮುಖಿಯಾಗಿಸುವ ನಿಟ್ಟಿನಲ್ಲಿ ನಾವು ಅಣಿಯಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಭಾಷೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕ್ಷೇತ್ರಗಳಲ್ಲಿ ಕನ್ನಡವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಯೋಜನೆಗಳನ್ನು ರೂಪಿಸುತ್ತಿದೆ. ವಿವಿಧ ವಿಷಯಗಳಲ್ಲಿ ವಿಶ್ವಕೋಶಗಳ ಸಿದ್ಧತೆ, ಪರಿಭಾಷಾ ಕೋಶಗಳ ಸಿದ್ಧತೆ, ಉಪಭಾಷಾ ಕೋಶಗಳ ಸಿದ್ಧತೆ, ವಿಜ್ಞಾನ ಪಠ್ಯಪುಸ್ತಕಗಳ ಸಿದ್ಧತೆ ಮುಂತಾದ ಅವಶ್ಯಕ ಯೋಜನೆಗಳಲ್ಲಿ ವಿಶ್ವವಿದ್ಯಾಲಯವು ತನ್ನನ್ನು ತೊಡಗಿಸಿಕೊಳ್ಳುತ್ತದೆ."

ಈ ಹಿನ್ನೆಲೆಯಲ್ಲಿ ಕಳೆದ ಒಂದು ವರ್ಷದಲ್ಲಿ ವಿಶ್ವವಿದ್ಯಾಲಯವು ಕೈಗೊಂಡಿರುವ ಪ್ರಮುಖ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ಉಲ್ಲೇಖಿಸಬಯಸುತ್ತೇನೆ.

"ಸಂಶೋಧನೆಯ ಜೊತೆಜೊತೆಗೆ ನಮ್ಮ ಅಧ್ಯಾಪಕರ ಮೇಲೆ ಅನೇಕ ಒತ್ತಡಗಳೂ ಇವೆ. ಎಂ.ಫಿಲ್., ಎಂ.ಎ.ಪಿಎಚ್.ಡಿ., ಎಂ.ವಿ.ಎ., ಎಂ.ಮ್ಯೂಸಿಕ್ ಮುಂತಾದ ಪದವಿಗಳ ಅಧ್ಯಾಪನ, ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಕೋರ್ಸ್‌ವರ್ಕ್, ವಿವಿಧ ಪೀಠಗಳ ಸಂಚಾಲಕತ್ವ, ದೂರಶಿಕ್ಷಣ ನಿರ್ದೇಶನಾಲಯದ ಕಾರ್ಯಚಟುವಟಿಕೆಗಳು ಮುಂತಾದಂತೆ ಅನೇಕ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇವೆಲ್ಲವುಗಳ ಜೊತೆಗೆ ಕೆಲವರು ಆಡಳಿತಾಂಗದ ಜವಾಬ್ದಾರಿಗಳನ್ನೂ ನಿರ್ವಹಿಸಬೇಕಾಗುತ್ತದೆ. ವಿವಿಧ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಗಳಲ್ಲಿ ಭಾಗವಹಿಸಬೇಕಾಗುತ್ತದೆ. ಇಷ್ಟೆಲ್ಲಾ ಅನಿವಾರ್ಯ ಕೆಲಸಗಳ ಜೊತೆಗೆ ನಮ್ಮ ಸಂಶೋಧನೆಯೂ ಮುನ್ನಡೆಯುತ್ತಿದೆ."

ಈ ವರ್ಷ ನಾವು ಕೆಲವು ವಿಶಿಷ್ಟ ಯೋಜನೆಗಳನ್ನು ಕೈಗೊಂಡಿದ್ದೇವೆ.

ಕನ್ನಡ ಪ್ರದೇಶಗಳ ರಾಷ್ಟ್ರೀಯತೆಯ ಅಭಿವ್ಯಕ್ತಿಗಳು
ಹಂಪಿ ಪರಸರದ ಐತಿಹ್ಯಗಳು
ಅಭಿವೃದ್ಧಿ ಪರಿಭಾಷಾ ಕೋಶ
ಮಾನವ ವಿಶ್ವಕೋಶ
ಜಿಲ್ಲಾವಾರು ದೇವಾಲಯ ಕೋಶಗಳು
ಕನ್ನಡ ಶಾಸನಗಳಲ್ಲಿ ಪ್ರಾಚೀನ ಸ್ಥಳನಾಮಗಳು
ಕನ್ನಡ ಉಪಭಾಷಾ ಪದಕೋಶ

ಕನ್ನಡ ಭಾಷಾಂತರ ಕೋಶ
ದ್ರಾವಿಡ ಭಾಷೆಗಳ ಸಾಹಿತ್ಯ ಚರಿತ್ರೆ
ಕನ್ನಡ ಹಸ್ತಪ್ರತಿಗಳ ಸಾಂಸ್ಕೃತಿಕ ಸಂಕಥನ
ಹೊಸ ತಲೆಮಾರಿನ ಸಾಹಿತ್ಯ ಸಂಪುಟ
ಮಹಿಳಾ ಅಧ್ಯಯನದ ವೈಧಾನಿಕತೆಗಳು

ಇವೇ ಮುಂತಾಗಿ ಕನ್ನಡ ಮತ್ತು ಕರ್ನಾಟಕವನ್ನು ವಿವರವಾಗಿ ತಿಳಿಯಬಯಸುವವರಿಗೆ, ಅಧ್ಯಯನ ಮಾಡುವವರಿಗೆ ಪೂರಕವಾಗುವಂಥ ಸಾಂಸ್ಕೃತಿಕ ಕೋಶಗಳನ್ನು, ಪಠ್ಯಗಳನ್ನು ರೂಪಿಸಲಾಗುತ್ತಿದೆ.

ಕನ್ನಡ ವಿಶ್ವವಿದ್ಯಾಲಯಕ್ಕೆ ಯು.ಜಿ.ಸಿ.ಯ ಪ್ರತಿಷ್ಠಿತ ಸ್ಯಾಪ್ ಯೋಜನೆ ಹಾಗೂ ೮ ಪ್ರಧಾನ ಸಂಶೋಧನಾ ಯೋಜನೆಗಳು ಮಂಜೂರಾಗಿದ್ದು, ಅವುಗಳನ್ನು ಯಶಸ್ವಿಯಾಗಿ ಮುಂದುವರಿಸಿಕೊಂಡು ಬರಲಾಗುತ್ತಿದೆ. ಇದಲ್ಲದೆ ಐ.ಸಿ.ಎಸ್.ಎಸ್.ಆರ್, ಐ.ಸಿ.ಎಚ್.ಆರ್, ನ್ಯಾಷನಲ್ ಮ್ಯಾನುಸ್ಕ್ರಿಪ್ಟ್ ಮಿಷನ್, ಸಿ.ಐ.ಐ.ಎಲ್, ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್ ಮುಂತಾದ ಸಂಸ್ಥೆಗಳೊಡನೆ ಸಹಯೋಗ ಇಟ್ಟುಕೊಂಡು ಸಂಶೋಧನಾ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಕಳೆದ ಒಂದು ವರ್ಷದಲ್ಲಿ ಐ.ಸಿ.ಎಸ್.ಎಸ್.ಆರ್ ಸಂಸ್ಥೆಯಿಂದ Educational Status of Scheduled Tribes, Nomads and Semi Nomads in Karnataka and Goa Attainments and Challenges ಯೋಜನೆಗಳನ್ನು ಪಡೆಯಲಾಗಿದ್ದು, ಯೋಜನೆಗಳು ಮುಂದುವರಿಯುತ್ತಿವೆ.

ಒಂದು ಸಂಸ್ಕೃತಿಯು ಇನ್ನೊಂದು ಸಂಸ್ಕೃತಿಯೊಂದಿಗಿನ ಅರ್ಥಪೂರ್ಣ ಸಂವಾದದ ಮೂಲಕವೇ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬಲ್ಲದು. ಆದರೆ ಈ ಸಂವಾದವು ಅಸಮಾನತೆಯ ತಳಹದಿಯ ಮೇಲೆ ನಡೆದರೆ ಅದು ಆಕ್ಷೇಪಾರ್ಹವಾಗುತ್ತದೆ. ಮೊದಲಿಗೆ ಕನ್ನಡ ಭಾಷೆ–ಸಂಸ್ಕೃತಿಯು ಸಂಸ್ಕೃತದೊಂದಿಗಿನ ಅನುಸಂಧಾನಕ್ಕೆ ಪ್ರಯತ್ನಿಸಿದೆ. ಈಗ ಜಾಗತೀಕರಣದ ಸಂದರ್ಭದಲ್ಲಿ ಇಂಗ್ಲಿಷಿನೊಂದಿಗೆ ಅನುಸಂಧಾನಗೊಳ್ಳಬೇಕಿದ್ದು, ಈ ಅನುಸಂಧಾನಕ್ಕೆ ಕನ್ನಡವು ತನ್ನನ್ನು ತಾನು ಸಬಲೀಕರಣಗೊಳಿಸಿಕೊಳ್ಳಬೇಕಿದೆ. ಬದಲಾಗುತ್ತಿರುವ ಈ ಸನ್ನಿವೇಶ ಮತ್ತು ಕನ್ನಡದ ಸಬಲೀಕರಣವನ್ನು ಗಮನದಲ್ಲಿಟ್ಟುಕೊಂಡು, ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ ಕನ್ನಡದಲ್ಲಿ ವೈದ್ಯಕೀಯ, ತಾಂತ್ರಿಕ, ಕಾನೂನು ಮತ್ತು ಇತರ ಕ್ಷೇತ್ರ ಸಂಬಂಧಿತ ಜ್ಞಾನದ ನಿರ್ಮಾಣಕ್ಕೆ ತೊಡಗಲು ಉದ್ದೇಶಿಸಿದೆ.

ಈ ವಿಶ್ವವಿದ್ಯಾಲಯವು ಸ್ಥಾಪಕ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರರು, ಡಾ.ಎಂ.ಎಂ.ಕಲಬುರ್ಗಿಯವರಂಥ ಹಿರಿಯರು ಮತ್ತು ನಂತರದ ಇತರ ಎಲ್ಲ ಕುಲಪತಿಗಳ ನಿರಂತರ ಪ್ರಯತ್ನದ ಫಲವಾಗಿ ರೂಪುಗೊಂಡದ್ದಾಗಿದೆ. ನಾನು ಅವರೆಲ್ಲರ ದರ್ಶನಾತ್ಮಕ ಪ್ರಯತ್ನವನ್ನು ಮತ್ತು ಅವರ ಕನಸುಗಳನ್ನು ಸಾಕಾರಗೊಳಿಸುವ ಸಂದರ್ಭದಲ್ಲಿ ನನಗೆ ದೊರೆತ ಅವಕಾಶಕ್ಕೆ ಋಣಿಯಾಗಿದ್ದೇನೆ.

ಕನ್ನಡ ತಂತ್ರಾಂಶ, ಕಂಪ್ಯೂಟರ್‌ಗೆ ಸಂಬಂಧಿಸಿದ ವಿಚಾರಗಳನ್ನು ಕನ್ನಡದಲ್ಲಿ ಅಳವಡಿಸುವ ಮೂಲಕ ಕನ್ನಡ ಭಾಷೆಯನ್ನು ಆಧುನಿಕ ಯುಗಕ್ಕೆ ಸಜ್ಜುಗೊಳಿಸವ ಪ್ರಯತ್ನವನ್ನು ವಿಶ್ವವಿದ್ಯಾಲಯ ಮಾಡಬೇಕಾಗಿದೆ.

ಕನ್ನಡ ವಿಶ್ವವಿದ್ಯಾಲಯದ ನಾಲ್ಕು ಫ್ಯಾಕಲ್ಟಿಗಳಿಂದ ನಾಲ್ಕು ಬಗೆಯ ಸಂಶೋಧನಾ ನಿಯತಕಾಲಿಕೆ(ಜರ್ನಲ್)ಗಳನ್ನು ಹೊರಡಿಸುವ ಮೂಲಕ ಕನ್ನಡದಲ್ಲಿ ಎಲ್ಲ ಬಗೆಯ ಗಂಭೀರ ಲೇಖನಗಳನ್ನು ಬರೆಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಕನ್ನಡ ವಿಶ್ವವಿದ್ಯಾಲಯವು ಈಗ ಹೊರತರುತ್ತಿರುವ ವಿಜ್ಞಾನ ಸಂಗಾತಿ ಮತ್ತು ಚೆಲುವ ಕನ್ನಡ ಪತ್ರಿಕೆಗಳನ್ನು ಮೇಲ್ದರ್ಜೆಗೆ ಏರಿಸಿದೆ.

ಜಾಗತಿಕ ಮಟ್ಟದಲ್ಲಿ ಕನ್ನಡವನ್ನು ಗುರುತಿಸುವ ಹಾಗೆಯೇ ಇಲ್ಲಿನ ಸಂಶೋಧನೆಗಳನ್ನು ಇತರೆ ಭಾಷೆ ಮತ್ತು ದೇಶಗಳಿಗೂ, ಹೊರಗಿನ ವಿಶ್ವಜ್ಞಾನವನ್ನು ಕನ್ನಡ ಭಾಷೆಗೂ ತರುವ ಮೂಲಕ, ವಿಶ್ವಪ್ರಜ್ಞೆಯ ಒಂದು ಭಾಗವಾಗಿ ಕನ್ನಡವನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ.

ನಮ್ಮ ಪರಂಪರೆ ಮತ್ತು ಸಂಸ್ಕೃತಿಯನ್ನು ಸಾವಿರಾರು ವರ್ಷಗಳಿಂದ ಪೋಷಿಸಿಕೊಂಡು ಬಂದಿರುವ ದೇಶಿ ಜ್ಞಾನ ಶಾಖೆಗಳನ್ನು ಪುನರ್ ಅಧ್ಯಯನಕ್ಕೆ ಒಳಪಡಿಸುವ ಮೂಲಕ ನಮ್ಮ ಸಾಂಸ್ಕೃತಿಕ ಪರಂಪರೆಗಳ ಸಹಜ ಶೋಧಕ್ಕೆ ದಾರಿ ಮಾಡಿಕೊಡುವ ಕಾರ್ಯವನ್ನು ವಿಶ್ವವಿದ್ಯಾಲಯ ಮಾಡುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ೭೮೦ ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿದ್ದು ಈಗಾಗಲೇ ಲಕ್ಷಾಂತರ ಮರಗಿಡಗಳನ್ನು ಬೆಳೆಸಲಾಗಿದೆ. ಕನ್ನಡ ವಿಶ್ವವಿದ್ಯಾಲಯದ ವಿದ್ಯಾರಣ್ಯ ಆವರಣವು ಇಡೀ ಕರ್ನಾಟಕದಲ್ಲಿಯೇ ಅತ್ಯಂತ ಸುಂದರ ಪರಿಸರವನ್ನು

ಹೊಂದಿದ್ದು ಬಹುಮುಖ್ಯ ಜೈವಿಕ ಅರಣ್ಯ ಪ್ರದೇಶವಾಗಿ ಮಾರ್ಪಟ್ಟಿದೆ. ಆದರೆ ಇಂಥ ಜೈವಿಕ ತಾಣದ ರಕ್ಷಣೆಗೆ ನಾವು ಪರಿತಪಿಸಬೇಕಾಗಿದೆ. ರಕ್ಷಣಾಗೋಡೆಯ ನಿರ್ಮಾಣ ನಮ್ಮ ಆದ್ಯತೆಯ ಕೆಲಸವಾಗಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರದ ನೆರವು ಮತ್ತು ಸಹಕಾರವನ್ನು ನಾನು ಕೋರುತ್ತೇನೆ.

ಬೋಧಕರ ಶೈಕ್ಷಣಿಕ ಹಾಗೂ ಸಂಶೋಧನಾ ಗುಣಮಟ್ಟವನ್ನು ಉನ್ನತೀಕರಿಸುವ ಎಲ್ಲ ತರಹದ ಸೌಲಭ್ಯಗಳನ್ನು ವಿಶ್ವವಿದ್ಯಾಲಯ ಒದಗಿಸಿದೆ. ಅನೇಕರಿಗೆ ಸಂಶೋಧನೆಗಾಗಿ ಯುಜಿಸಿಯ ಆರ್ಥಿಕ ಅನುದಾನವೂ ದೊರೆತಿದೆ. ಪುಸ್ತಕ ಬರವಣಿಗೆ ಹಾಗೂ ಮುಂದುವರಿದ ಸಂಶೋಧನೆಗಳನ್ನು ಕೈಗೊಳ್ಳಲು ಅಧ್ಯಯನ ರಜೆಯ ಸೌಲಭ್ಯವನ್ನೂ ನೀಡಲಾಗುತ್ತಿದೆ.

ಪ್ರಾಧ್ಯಾಪಕರ ಶೈಕ್ಷಣಿಕ ಸಾಧನೆ ಮತ್ತು ಗುಣಮಟ್ಟದಲ್ಲಿನ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ನಿಯತವಾಗಿ ಸಾಂಪ್ರದಾಯಕ ಮತ್ತು ಅಸಾಂಪ್ರದಾಯಿಕ ಮೌಲ್ಯಮಾಪನಗಳನ್ನು ಮಾಡಲಾಗುತ್ತಿದೆ. ಪ್ರಾಧ್ಯಾಪಕರ ಸಾಧನೆಗಳನ್ನು ವಿಭಾಗಗಳ ಹಾಗೂ ನಿಕಾಯಗಳ ಮಟ್ಟದಲ್ಲಿ ಬಾಹ್ಯ ವಿದ್ವಾಂಸರನ್ನೊಳಗೊಂಡ ತಜ್ಞಸಮಿತಿಗಳ ಮೂಲಕ ಸಾಂಪ್ರದಾಯಕ ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತಿದೆ. ಪ್ರತಿಯೊಬ್ಬ ಪ್ರಾಧ್ಯಾಪಕರು ವೈಯಕ್ತಿಕವಾಗಿ ವಿಚಾರ ಸಂಕಿರಣ, ಕಾರ್ಯಾಗಾರಗಳಲ್ಲಿ ಭಾಗವಹಿಸುವುದರ ಮೂಲಕ ಅಸಾಂಪ್ರದಾಯಿಕ ಮೌಲ್ಯಮಾಪನಕ್ಕೂ ಒಳಗಾಗುತ್ತಿದ್ದಾರೆ.

ಕನ್ನಡ ವಿಶ್ವವಿದ್ಯಾಲಯವು ಒಂದು ಸ್ವಾಯತ್ತ ಸಂಸ್ಥೆಯಾದರೂ ಹಣಕಾಸಿನ ಬಳಕೆಯ ವಿಚಾರದಲ್ಲಿ ಹಾಗೂ ನೀತಿ–ನಿಯಮಗಳನ್ನು ಪರಿಪಾಲಿಸುವ ವಿಚಾರದಲ್ಲಿ ಸರ್ಕಾರದ ಸಲಹೆ ಮತ್ತು ಮಾರ್ಗದರ್ಶನವನ್ನು ಗೌರವಿಸುತ್ತಾ ಬಂದಿದೆ. ಎಲ್ಲ ವ್ಯವಹಾರಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಒತ್ತು ನೀಡಲಾಗಿದೆ. ಅಧ್ಯಾಪಕರು, ಅಧಿಕಾರಿಗಳು, ಬೋಧಕೇತರ ನೌಕರರು, ಸಿಂಡಿಕೇಟ್ ಸದಸ್ಯರು ಮತ್ತು ವಿದ್ಯಾರ್ಥಿಗಳ ಸಂಬಂಧ ಆರೋಗ್ಯಕರವಾಗಿರುವಂತೆ ನೋಡಿಕೊಳ್ಳಲಾಗುತ್ತಿದೆ. ಪರಸ್ಪರ ವಿಶ್ವಾಸದ ವಾತಾವರಣವನ್ನು ನಿರ್ಮಾಣ ಮಾಡಲಾಗಿದೆ.

ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಗಳ ನಡಾವಳಿಗಳು, ವಿವಿಧ ಉಪಸಮಿತಿಗಳ ನಡಾವಳಿಗಳು, ಅಧ್ಯಯನ ಯೋಜನೆಗಳು, ಪಿಎಚ್.ಡಿ ಪದವಿಗಳು, ಮಾರ್ಗದರ್ಶಕರ ವಿವರಗಳು, ಹಣಕಾಸು ವಿಭಾಗದ ನಡಾವಳಿಗಳು, ದೂರಶಿಕ್ಷಣ ನಿರ್ದೇಶನಾಲಯದ ಚಟುವಟಿಕೆಗಳು, ಪ್ರಸಾರಾಂಗದ ಪ್ರಕಟಣೆಗಳು ಮುಂತಾದಂತೆ ಎಲ್ಲ ಮುಖ್ಯ ವಿವರಗಳನ್ನು ಕನ್ನಡ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇವುಗಳನ್ನು ಯಾರಾದರೂ ಯಾವ ಸಂದರ್ಭದಲ್ಲಿಯೂ ಪರಿಶೀಲಿಸಬಹುದಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳಿಗಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ವಿಶೇಷ ಘಟಕ, ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗ ಮತ್ತು ಕ್ರೀಡಾ ವಿಭಾಗಗಳನ್ನು ತೆರೆಯಲಾಗಿದೆ.

ಅಧ್ಯಯನ ವಿಭಾಗಗಳಲ್ಲಿ ಆಂತರಿಕ ಸಂಶೋಧನಾ ವಿದ್ಯಾರ್ಥಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ರಾಷ್ಟ್ರೀಯ ಶಿಷ್ಯವೇತನ ಪಡೆಯದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವೇ ಮಾಸಿಕ ಶಿಷ್ಯವೇತನ ನೀಡುತ್ತಿದೆ.

ವಾರ್ಷಿಕ ಸಾದಿಲ್ವಾರು ಮತ್ತು ಪ್ರಬಂಧ ಸಿದ್ಧಪಡಿಸಲು ರಾಷ್ಟ್ರೀಯ ಶಿಷ್ಯವೇತನ ಪಡೆಯದಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ವಿವಿಧ ವಿಭಾಗಗಳಲ್ಲಿ ಆಂತರಿಕ ವಿದ್ಯಾರ್ಥಿಗಳಾಗಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಜೆಆರ್‌ಎಫ್ ಮತ್ತು ರಾಜೀವ್‌ಗಾಂಧಿ ರಾಷ್ಟ್ರೀಯ ಶಿಷ್ಯವೇತನ, ಐಸಿಎಚ್‌ಆರ್, ಐಸಿಎಸ್‌ಎಸ್‌ಆರ್ ಮತ್ತು ಮೌಲಾನ ಆಝಾದ್ ರಾಷ್ಟ್ರೀಯ ಶಿಷ್ಯವೇತನಗಳನ್ನು ಪಡೆಯುವ ಅನುಕೂಲ ಮಾಡಿಕೊಡಲಾಗಿದೆ.

ವಿಜ್ಞಾನ ನಿಕಾಯ ಆರಂಭ

ಕನ್ನಡ ವಿಶ್ವವಿದ್ಯಾಲಯದಲ್ಲಿ ನಾಲ್ಕು ಫ್ಯಾಕಲ್ಟಿಗಳು ಇದ್ದು, ಅದರಲ್ಲಿ ಮೂರು ಫ್ಯಾಕಲ್ಟಿಗಳು ಈಗ ಆರಂಭಗೊಂಡು ಕಾರ್ಯನಿರತವಾಗಿವೆ. ಆದರೆ ವಿಜ್ಞಾನಕ್ಕೆ ಸಂಬಂಧಪಟ್ಟ ಫ್ಯಾಕಲ್ಟಿ ಇನ್ನೂ ಆರಂಭಗೊಂಡಿಲ್ಲ. ಪಾರಂಪರಿಕ ಜ್ಞಾನ ಪರಂಪರೆಯನ್ನು ಪರಿಚಯಿಸುವ ದೇಸಿ ವಿಜ್ಞಾನವನ್ನು ಅಧ್ಯಯನ ಮಾಡಲು ಈ ಫ್ಯಾಕಲ್ಟಿಯಲ್ಲಿ ಅವಕಾಶವಿದೆ. ಭಾರತೀಯ ವೈದ್ಯ ಪದ್ಧತಿ, ಖಗೋಳಶಾಸ್ತ್ರ, ಭೂಮಿ ಮತ್ತು ಜಲವಿಜ್ಞಾನ, ಸಸ್ಯವಿಜ್ಞಾನ, ದೇಸಿ ಕೃಷಿಜ್ಞಾನ, ಬೀಜ ತಂತ್ರಜ್ಞಾನ ಮುಂತಾಗಿ ಇಲ್ಲಿ ಹಳ್ಳಿಗಾಡಿನ ಜನತೆಯ ಪಾರಂಪರಿಕ ವಿಜ್ಞಾನವನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ ಈ ಫ್ಯಾಕಲ್ಟಿಯನ್ನು ಅತಿ ಶೀಘ್ರದಲ್ಲಿಯೇ ಆರಂಭಿಸಲಾಗುತ್ತಿದೆ.

ಕನ್ನಡದಲ್ಲಿ ವಿಜ್ಞಾನವನ್ನು ಓದಿ ತಿಳಿದುಕೊಳ್ಳುವ ಪಠ್ಯಗಳ ಅಭಾವ ತುಂಬ ಇದೆ. ಈ ಹಿನ್ನೆಲೆಯಲ್ಲಿ ವೈದ್ಯಕೀಯ ಕ್ಷೇತ್ರ, ತಾಂತ್ರಿಕ ಕ್ಷೇತ್ರ ಮತ್ತು ಕೃಷಿಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ಬಗೆಯ ವಿಶ್ವಕೋಶಗಳು ಮತ್ತು ಪಠ್ಯಗಳನ್ನು ಕನ್ನಡದಲ್ಲಿ ಸಿದ್ಧಪಡಿಸುವ ಮೂಲಕ ಹಳ್ಳಿಯ ವಿದ್ಯಾರ್ಥಿಗಳು ಕೂಡ ವಿಜ್ಞಾನವನ್ನು ಕನ್ನಡದಲ್ಲಿ ಕಲಿಯಲು ಅವಕಾಶ ಮಾಡಿಕೊಡುವ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಜನಸಾಮಾನ್ಯರು ಮತ್ತು ಹಳ್ಳಿಗಳಲ್ಲಿನ ವಿದ್ಯಾರ್ಥಿಗಳಿಗೆ ಅರ್ಥವಾಗುವಂಥ ಸರಳ ಪಠ್ಯಗಳನ್ನು ಸಿದ್ಧಪಡಿಸುವ ಯೋಜನೆಯನ್ನು ವಿಜ್ಞಾನ ನಿಕಾಯದ ಮೂಲಕ ಮಾಡುವ ಆಶಯ ನಮ್ಮದಾಗಿದೆ.

ಭಾಷಾಂತರ ಕೇಂದ್ರ

ಕನ್ನಡ ವಿಶ್ವವಿದ್ಯಾಲಯದ ಸಂಶೋಧನೆಗಳನ್ನು ಕೇವಲ ಕರ್ನಾಟಕದಲ್ಲಿ ಅಲ್ಲದೆ ಹೊರನಾಡು ಮತ್ತು ಜಗತ್ತಿಗೆ ಪ್ರಸಾರ ಮಾಡಬೇಕೆಂಬ ಉದ್ದೇಶದಿಂದ ಭಾಷಾಂತರ ಕೇಂದ್ರವನ್ನು ಇದೀಗ ಸ್ಥಾಪಿಸಲಾಗಿದೆ. ಈ ಕೇಂದ್ರದಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಾತಿನಿಧಿಕ ಸಂಶೋಧನೆಗಳನ್ನು ಹಾಗೂ ನಾಡಿನ ಪ್ರಖ್ಯಾತ ವಿದ್ವಾಂಸರ ಬರಹಗಳನ್ನು ಕೂಡ ಅನುವಾದ ಮಾಡಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳುವ ಆಶಯ ಹೊಂದಲಾಗಿದೆ.

ಇಂದು, ಇವತ್ತಿನ ಈ ೨೨ನೇ ನುಡಿಹಬ್ಬದಲ್ಲಿ ಒಟ್ಟು ೬೭೯ ಸಂಶೋಧಕರು ಮತ್ತು ವಿದ್ಯಾರ್ಥಿಗಳು ಪದವಿಗಳನ್ನು ಪಡೆಯುತ್ತಿದ್ದಾರೆ. ಡಿ.ಲಿಟ್–೩, ಪಿಎಚ್.ಡಿ.–೫೭, ಎಂ.ಫಿಲ್–೯೨, ಎಂ.ಎ.,ಪಿಎಚ್.ಡಿ–೧೧, ಎಂ.ವಿ.ಎ–೧೩, ಎಂ.ಮ್ಯೂಸಿಕ್–೭, ಬಿ.ವಿ.ಎ–೨೪೯, ಬಿ.ಮ್ಯೂಸಿಕ್–೫, ಚಿತ್ರಕಲೆ ಡಿಪ್ಲೊಮ–೨೩೫ ಮತ್ತು ನಾಟಕ ಡಿಪ್ಲೊಮ–೭ ಈ ಎಲ್ಲ ಸಂಶೋಧಕರು ಮತ್ತು ವಿದ್ಯಾರ್ಥಿಗಳಿಗೆ, ನಾಡೋಜ ಗೌರವ ಪದವಿಯನ್ನು ಪಡೆದ ಗಣ್ಯರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತ ಎಲ್ಲ ರೀತಿಯ ಸಹಕಾರ ನೀಡುತ್ತಿರುವ ಕರ್ನಾಟಕ ಸರ್ಕಾರಕ್ಕೆ ಸನ್ಮಾನ್ಯ ಕುಲಾಧಿಪತಿಗಳಿಗೆ, ಸಮಕುಲಾಧಿಪತಿಗಳಿಗೆ ಹಾಗೂ ನುಡಿಹಬ್ಬ ಭಾಷಣ ಮಾಡಿದ ಶ್ರಿ ನಾಗೇಶ ಹೆಗಡೆ ಅವರಿಗೆ, ಎಲ್ಲ ರೀತಿಯ ಸಹಕಾರ ನೀಡುತ್ತಿರುವ ಕಾರ್ಯಕಾರಿ ಮತ್ತು ಆಡಳಿತ ಮಂಡಳಿ ಸದಸ್ಯರಿಗೆ, ನನ್ನ ಪ್ರೀತಿಯ ಸಮಸ್ತ ಸಹೋದ್ಯೋಗಿಗಳಿಗೆ ಮತ್ತು ಸಭೆಯಲ್ಲಿರುವ ತಮ್ಮೆಲ್ಲರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಜೈ ಕರ್ನಾಟಕ ಮಾತೆ

ಡಾ. ಹಿ.ಚಿ. ಬೋರಲಿಂಗಯ್ಯ
ಮಾನ್ಯ ಕುಲಪತಿಗಳು
(೨೨ನೇ ಘಟಿಕೋತ್ಸವ ಸ್ವಾಗತ ಭಾಷಣದ
ಆಯ್ದ ಭಾಗ)

ನುಡಿಹಬ್ಬ ೨೨ – ಘಟಿಕೋತ್ಸವ ಭಾಷಣ

ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ಹಾಗೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆದ ಶ್ರೀ ಹನ್ಸ್‌ರಾಜ್ ಭಾರದ್ವಾಜ್ ಅವರೆ, ಕನಾಟಕ ಸರಕಾರದ ಉನ್ನತ ಶಿಕ್ಷಣ ಹಾಗೂ ಈ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಶ್ರೀ ಆರ್.ವಿ. ದೇಶಪಾಂಡೆಯವರೆ, ಮಾನ್ಯ ಕುಲಪತಿಗಳಾದ ಡಾ.ಹಿ.ಚಿ. ಬೋರಲಿಂಗಯ್ಯನವರೆ, ಕುಲಸಚಿವರೆ, ನಿಕಾಯಗಳ ಡೀನರೆ, ಕಾರ್ಯಕಾರಿ ಸಮಿತಿ ಮತ್ತು ಆಡಳಿತ ಮಂಡಳಿಯ ಸದಸ್ಯರೆ, 'ನಾಡೋಜ' ಪದವಿಯನ್ನು ಸ್ವೀಕರಿಸಲಿರುವ ಗಣ್ಯರೆ, ಸಂಶೋಧಕರೆ, ವಿದ್ಯಾರ್ಥಿಗಳೆ ಈ ನುಡಿಹಬ್ಬದಲ್ಲಿ ಪಾಲ್ಗೊಳ್ಳಲು ಬಂದಿರುವ ಸಭಿಕರೆ.

ಕನ್ನಡ ವಿಶ್ವವಿದ್ಯಾಲಯದ ಆವರಣಕ್ಕೆ ಬಂದಾಗಲೆಲ್ಲಾ ನಮ್ಮ ಮನಸ್ಸು ಪ್ರಫುಲ್ಲಿತವಾಗುತ್ತದೆ. ಇಲ್ಲಿನ ಬಂಡೆಗಳು, ಇಲ್ಲಿ ಮರುಹುಟ್ಟು ಪಡೆದ ಸಸ್ಯಗಳು, ಇಲ್ಲಿನ ಸಹಜ ನೈಸರ್ಗಿಕ ಸೌಂದರ್ಯ ಜತೆಜತೆಗೆ ಕನ್ನಡದ ಕಲೆ, ಸಂಸ್ಕೃತಿ ಪರಂಪರೆಗಳನ್ನು ಬಿಂಬಿಸುವ ಶಿಲ್ಪ, ವಾಸ್ತುಶಿಲ್ಪ –ಹೀಗೆ ಇಲ್ಲಿನ ಒಂದೊಂದೂ ಕನ್ನಡ ಲೋಕದ ಅನನ್ಯತೆಯನ್ನು ಮೆರೆಯುವ ಪ್ರತೀಕಗಳಾಗಿವೆ.

ನಮ್ಮಲ್ಲಿ ಎರಡು ಕನ್ನಡ ನಾಡುಗಳಿವೆ: 'ವಿಜ್ಞಾನದ ರಾಜಧಾನಿ' ಎಂದು ಕರೆಸಿಕೊಂಡು ವಿಶ್ವವನ್ನು ಬೆಸೆಯುವ ಕನ್ನಡ. ಅದು ಕಾರ್ಪೊರೇಟ್ ವಲಯಗಳ ಥಳಕಿನ ಕನ್ನಡ. ಅದು ಕಾರ್ಪೊರೇಟ್ ವಲಯಗಳ ಥಳಕಿನ ಕನ್ನಡ. ರಾಷ್ಟ್ರದ ನಾಯಕರು, ವಿದೇಶೀ ಗಣ್ಯರು, ಉದ್ಯಮಿಗಳನ್ನು ಆಕರ್ಷಿಸುವ ಕನ್ನಡ. ಅದು ನಂದನ ನೀಲೇಕಣಿಯವರನ್ನು, ಶಕುಂತಲಾ ದೇವಿಯವರನ್ನು, ಮಾಲತಿ ಹೊಳ್ಳರನ್ನು, ಅನಿಲ್ ಕುಂಬ್ಳೆಯರನ್ನು, ನಾರಾಯಣಮೂರ್ತಿ–ಅನಂತಮೂರ್ತಿಯಂಥವರನ್ನು ನಾಡಿನಾಚೆ ಪ್ರದರ್ಶಿಸುವ ಕನ್ನಡ. ಅದು ಕ್ಯಾಲಿಫೋರ್ನಿಯಾಕ್ಕೆ ಕಂಪ್ಯೂಟರ್ ಪರಿಣತರನ್ನು, ಬಾಹ್ಯಾಕಾಶಕ್ಕೆ ಉಪಗ್ರಹಗಳನ್ನು, ಮಂಗಳಲೋಕಕ್ಕೆ ಪ್ರೋಬ್‌ಗಳನ್ನೂ ಕಳಿಸಬಲ್ಲ ಧೀರರ ಕನ್ನಡ. ಅದು ಹೆಬ್ಬಾಗಿಲ ಕನ್ನಡ.

ಇನ್ನೊಂದು ಒಳಮನೆಯ ಕನ್ನಡ, ಅಂತರ್ಮುಖಿ ಕನ್ನಡ. ಈ ಒಳಮನೆಯ ಕನ್ನಡ ಏನಿದೆ ಅದು ನಮ್ಮ ಸ್ವಂತದ ಕನ್ನಡ. ಅಲ್ಲಿ ಹಾಡು ಹಸೆಗಳಿವೆ, ಕಾಷ್ಠಶಿಲ್ಪಗಳಿವೆ, ಗುಮಟೆ ಪಾಂಗುಗಳಿವೆ, ಪನತ, ಹಗೇವು, ಬೀಸುಗಲ್ಲು, ಮನೆಮದ್ದುಗಳಿವೆ, ಕಜ್ಜಾಯ–ಕಷಾಯಗಳಿವೆ. ಅದು ರೈತ ಮಕ್ಕಳ, ಬುಡಕಟ್ಟಿನವರ ಖಾಸಾ ಕನ್ನಡ. ಅದು ಜಾಯಮಾನದ ಕನ್ನಡ.

ಈ ಒಳಮನೆಯ ಕನ್ನಡದ ಉಸ್ತುವಾರಿಯ, ಪರಿಚಾರಿಕೆಯ ಕೆಲಸ ಮಾಡುವ ಕನ್ನಡ ವಿಶ್ವವಿದ್ಯಾಲಯ ನಮ್ಮೆಲ್ಲರ ಹೆಮ್ಮೆಯ ಸಂಸ್ಥಾನವೆನಿಸಿದೆ. ಕನ್ನಡ ಜ್ಞಾನ ಮತ್ತು ಕೌಶಲ ಪರಂಪರೆಯನ್ನು ಕೆಡದಂತೆ ಕಾಯುವ ಉತ್ತಮ ಕೆಲಸವನ್ನು ಅದು ಮಾಡುತ್ತಿದೆ. ಜ್ಞಾನಪರಂಪರೆಯಲ್ಲಿ, ನಮ್ಮ ಜನಪದದಲ್ಲಿ ಅಂತಸ್ಥವಾಗಿದ್ದ ದೇಸಿ ವಿಜ್ಞಾನವನ್ನು ಹುಡುಕಿ ತೆಗೆಯುವ, ಸಂಸ್ಕರಿಸಿ ಮತ್ತೆ ಪುಟಕ್ಕಿಡುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಹೊಸದಾಗಿ ಈ ವರ್ಷ ಆರಂಭಿಸುತ್ತದೆ.

ಅದು ಹೊಸದಾಗಿದ್ದರಿಂದ ನಾಲ್ಕು ಮಾತು ಹೇಳಬೇಕಾಗಿದೆ.

ಭಾರತದ ವಿಜ್ಞಾನ ಪರಂಪರೆ ಭವ್ಯವಾಗಿದೆ. ಜಾಗತಿಕ ಮಾನ್ಯತೆ ಗಳಿಸಿದೆ. ಚರಕ, ಶುಶ್ರುತರಿಂದ ಹಿಡಿದು, ಆರ್ಯಭಟ, ವರಾಹ ಮಿಹಿರ, ಭಾಸ್ಕರಾಚಾರ್ಯರೇ ಮುಂತಾದ ಪಂಡಿತರು ಇಂದಿನ ಟೆಕ್ನಾಲಜಿ ಯುಗದಲ್ಲೂ ಬಹುವಂದ್ಯರಾಗಿದ್ದಾರೆ. ಯಾವುದೇ ವೈಜ್ಞಾನಿಕ ಸಲಕರಣೆಗಳಿಲ್ಲದೆ ತರ್ಕ, ಗಣಿತ ಮತ್ತು ನಿರಂತರ ವೀಕ್ಷಣೆಯಿಂದಲೇ ಭೂಮಿ ತನ್ನ ಅಕ್ಷದ ಸುತ್ತ ಸುತ್ತುತ್ತದೆಂದೂ ಚಂದ್ರನೆಂದರೆ ಸೂರ್ಯನ ಬೆಳಕನ್ನು ಪ್ರತಿಫಲಿಸುವ ಕನ್ನಡಿಯೆಂದೂ ಈ ನಿಶಿತಮತಿಗಳು ಸಾವಿರಾರು ವರ್ಷಗಳ ಹಿಂದೆಯೇ ಹೇಳಿದ್ದರು.

ಸಾಧಕರ ಪಟ್ಟಿಯಲ್ಲಿ ಸೇರದ ಸಂಶೋಧಕರು

ಅದಿರಲಿ. ಚರಿತ್ರೆಯಲ್ಲಿ ಆಗಿಹೋದ ದೊಡ್ಡ ದೊಡ್ಡ ಸಾಧಕರ ಹೆಸರುಗಳನ್ನು ಪಟ್ಟಿ ಮಾಡುತ್ತ, ಆ ಬೆರಳೆಣಿಕೆಯ ಅವರಿಂದಾಗಿಯೇ ವಿಜ್ಞಾನ ತಂತ್ರಜ್ಞಾನ ಇಷ್ಟರಮಟ್ಟಿಗೆ ಬೆಳೆದಿದೆ ಎಂದರೆ ಅದು ಹಿಂದಿನ ಜನಸಮುದಾಯಕ್ಕೆ ಅಪಚಾರ ಮಾಡಿದಂತಾಗುತ್ತದೆ. ವಿಜ್ಞಾನ ಎಂದೆಂದಿಗೂ ಸಾಮೂಹಿಕ ಯತ್ನವೇ ಆಗಿದೆ. ಗೆಲಿಲಿಯೊ ಗ್ರಹಗಳ ಚಲನೆಯ ಕ್ರಮವನ್ನು ಅಧ್ಯಯನ ಮಾಡಿದ ಎನ್ನುವಾಗ, ಆತನಿಗೆ ಲಭ್ಯವಿದ್ದ ಟೆಲಿಸ್ಕೋಪನ್ನು ನಿರ್ಮಿಸಿದವನ ಅಥವಾ ಅದಕ್ಕೂ ಹಿಂದೆ ಆ

ಟೆಲಿಸ್ಕೋಪ್‌ಗೆ ಬೇಕಿದ್ದ ಗಾಜಿನ ಮಸೂರವನ್ನು ಸಿದ್ಧಪಡಿಸಿದ ವ್ಯಕ್ತಿಯ ಅಥವಾ ಅದಕ್ಕೂ ಹಿಂದೆ ಗ್ರಹಗಳ ಸ್ಥಾನವನ್ನು ನಿಷ್ಕರ್ಷಿಸಿದ ಪಂಚಾಂಗಕರ್ತನ ಹೆಸರು ಗೌಣವಾಗಿರುತ್ತದೆ. ಒಬ್ಬ ವ್ಯಕ್ತಿಯ ಸಾಧನೆಯ ಹಿಂದೆ ಅನಾಮಧೇಯ ಸಾಧಕರ ಕೊಡುಗೆ ಅಪಾರವಾಗಿರುತ್ತದೆ. ಭಾರತದ ಮಟ್ಟಿಗೆ ಹೇಳುವುದಾದರೆ, ಮೌರ್ಯರ ಕಾಲದ ಕಮ್ಮಾರರು ತುಕ್ಕು ಹಿಡಿಯದ ಕಬ್ಬಿಣವನ್ನು ತಯಾರಿಸುತ್ತಿದ್ದರು. ದಿಲ್ಲಿಯಲ್ಲಿ ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ನಿಲ್ಲಿಸಿದ ಉಕ್ಕಿನ ಕಂಬ ಈಗಲೂ ಕುತುಬ್ ಮಿನಾರ್ ಬಳಿ ಪ್ರವಾಸಿಗರನ್ನು ಅಚ್ಚರಿಗೊಳಿಸುತ್ತಿದೆ. ಆರು ಟನ್ ತೂಕದ, ಏಳು ಮೀಟರ್ ಎತ್ತರದ ಈ ಸ್ತಂಭವನ್ನು ಒಂದೇ ಎರಕದಲ್ಲಿ ಅದೆಂಥ ಕುಲುಮೆಯಲ್ಲಿ ಯಾರು ತಯಾರಿಸಿದರೊ, ಅದಕ್ಕೆ ಬೇಕಿದ್ದ ಕಬ್ಬಿಣದ ಅದಿರನ್ನು ಯಾರು ಗಣಿಯಿಂದ ಎತ್ತಿದರೊ, ಹೇಗೆ ಎಲ್ಲಿಂದ ಸಾಗಿಸಿ ತಂದರೊ, ಆ ಅದಿರಿಗೆ ಇಂಗಾಲ ಸೇರಿಸಿದರೆ ತುಕ್ಕು ಹಿಡಿಯದ ಉಕ್ಕಾಗುತ್ತದೆ ಎಂದು ಯಾವ ಕಮ್ಮಾರ ಕಂಡು ಹಿಡಿದನೊ, ಅದಕ್ಕ ಬೇಕಿದ್ದ ಇಂಗಾಲವನ್ನು ಯಾವ ಮೂಲದಿಂದ ಪಡೆದಿದ್ದರೊ ಅಂತು ಅದೊಂದು ರಹಸ್ಯವಾಗಿಯೇ ಉಳಿದಿದೆ. ಅವೆಲ್ಲವೂ ಸಮುದಾಯದ ವಿಜ್ಞಾನವಾಗಿ ಇತಿಹಾಸದ ಅಲಿಖಿತ ಪುಟಗಳಿಗೆ ಸೇರಿಹೋಗಿವೆ.

ನಮ್ಮ ಆಹಾರ, ಬಟ್ಟೆ ಬರೆ ಪಾತ್ರೆ ಪಡಗಗಳೇ ಮುಂತಾದ ನಿತ್ಯ ಬಳಕೆಯ ವಸ್ತುಗಳಲ್ಲಿ ನಾವು ಹಿಂದಿನ 'ವಿಜ್ಞಾನಿ'ಗಳ ಶ್ರಮವನ್ನು ನೋಡಬೇಕು. ಹಿಂದಿನ ಕಾಲದಲ್ಲಿ ಎಲ್ಲೋ ಕಾಡುಮೇಡುಗಳ ಹುಲ್ಲುಗಾವಲಿನಲ್ಲಿ ಸಿಗುತ್ತಿದ್ದ ಸಾವಿರಾರು ಬಗೆಯ ತೃಣಧಾನ್ಯಗಳಲ್ಲಿ ಹೆಕ್ಕಿ ಹೆಕ್ಕಿ ಭತ್ತ, ಜೋಳ, ಗೋಧಿ, ಸಜ್ಜೆಯಂಥ ಕೆಲವೇ ಕೆಲವು ಧಾನ್ಯಗಳನ್ನು ಬಳಕೆಗೆ ತಂದರು. ಯಾವ ಬೀಜದಿಂದ ಎಂಥ ಎಣ್ಣೆ ಬರುತ್ತದೆ, ಯಾವ ನಾರಿನಿಂದ ಬಟ್ಟೆ ನೇಯಬಹುದು, ಯಾವ ಲೊಹವನ್ನು ಕರಗಿಸಿ ಕಟ್ಟಿದರೆ ಪಾತ್ರೆಯ ರೂಪ ಪಡೆಯಬಹುದು ಇಂಥವೇ ಮುಂತಾದ ಜ್ಞಾನದ ಹಿಂದೆ ನಾನಾ ಬಗೆಯ ಪ್ರಯೋಗಗಳು ನಡೆದಿವೆ. ವಿಜ್ಞಾನಿಗಳೆಂದು ನಾವು ಗುರುತಿಸದಿದ್ದರೊ ರೈತರು, ನೇಕಾರರು, ಬೆಸ್ತರು, ಕಂಬಾರರು, ಶಸ್ತ್ರವೈದ್ಯರೆನಿಸಿದ ನಾಪಿತರು, ನಾಟಿವೈದ್ಯರು, ಕಮ್ಮಾರರು ಇವರೆಲ್ಲರ ಪರಿಶ್ರಮದಿಂದ ರೂಪಗೊಂಡ ಸಸ್ಯಜ್ಞಾನ ಪ್ರಾಣಿಜ್ಞಾನ, ಕೀಟಜ್ಞಾನ, ಖನಿಜಜ್ಞಾನ, ಲೋಹವಿದ್ಯೆ, ನೇಯ್ಗೆ, ಶಸ್ತ್ರಾಸ್ತ್ರ ನಿರ್ಮಾಣ, ಪಶುಸಂಗೊಪನ, ಬೇಟೆ ಕೌಶಲ, ದೋಣಿ ನಿರ್ಮಾಣ– ಈ ಎಲ್ಲವುಗಳ ಹಿಂದೆ ಶೋಧಕರಿದ್ದರು. ಸಂಶೋಧಕರಿದ್ದರು. ಅವರು ನೆಲದಾಳದ ಜಲಮೂಲಗಳನ್ನು ಪತ್ತೆ ಮಾಡುತ್ತಿದ್ದರು. ನೀರನ್ನು ಮೇಲಕ್ಕೆತ್ತುವ ಹಾಗೂ ಮಳೆ ನೀರನ್ನು ಹಿಡಿದಿಡುವ ಎಂಜಿನಿಯರಿಂಗ್ ಜ್ಞಾನ ಅವರಲ್ಲಿ ವಿಕಾಸವಾಗಿತ್ತು; ಕಾಡಾನೆಗಳನ್ನು ಹಿಡಿದು ಪಳಗಿಸುವುದು ಗೊತ್ತಿತ್ತು. ಯಾವ ಸಸ್ಯದ ಇದ್ದಿಲನ್ನು ಕುಲುಮೆಯಲ್ಲಿ ಕೆಂಡವಾಗಿ ಬಳಸಿದರೆ ಲೋಹಕ್ಕೆ ಎಂಥ ಗುಣ ಬರುತ್ತದೆ ಎಂಬುದು ಅವರಿಗೆ ಗೊತ್ತಿತ್ತು.

ಡಮಸ್ಕಸ್ ಖಡ್ಗದಲ್ಲಿ ಕನ್ನಡದ ಕಾರ್ಬನ್

ಕುಲುಮೆಯ ವಿಚಾರಕ್ಕೆ ಮತ್ತೆ ಬರೋಣ. ನಮ್ಮ ರಾಜ್ಯದ 'ಇಂಗಳದಾಳ', 'ಬೂದಿಹಾಳ', ಗಟ್ಟಿ ಹೊಸಳ್ಳಿ, ಮೂಸೆ ಹೊಸಳ್ಳಿ ಅಥವಾ ಬೂದಿಕೋಟೆ ಮೊಂತಾದ ಹೆಸರುಗಳ ಹಳ್ಳಿಗಳಿಗೂ ಹಿಂದಿನ ತಲೆಮಾರಿನ ಲೋಹವಿದ್ಯೆಗೂ ನೇರ ಸಂಬಂಧವಿದೆ. ಬೂದಿ, ಇಂಗಾಲ, ಗಟ್ಟಿ ಮೂಸೆ ಮುಂತಾದ ಪದಗಳು ಕುಲುಮೆಗೆ ಸಂಬಂಧಿಸಿದ್ದವು. ಅಲ್ಲಿ ಸಾವಿರಾರು ವರ್ಷಗಳ ಹಿಂದೆ ಕಬ್ಬಿಣ, ಮ್ಯಾಂಗನೀಸ್ ಮುಂತಾದ ಲೋಹಗಳ ಅದಿರನ್ನು ಕುಲುಮೆಗಳಲ್ಲಿ ಕರಗಿಸಿ ಎರಕ ಹೊಯ್ಯುತ್ತಿದ್ದರು. ಕುಲುಮೆಗಳಲ್ಲಿ ಕಬ್ಬಿಣದ ಅದಿರುಗಳ ಜೊತೆಗೆ ಸುಣ್ಣ, ಇದ್ದಿಲು ಮತ್ತು ಮರಳನ್ನು ಕರಗಿಸಿ ಕುದಿಸಿ ಉತ್ತಮ ಗುಣಮಟ್ಟದ ಉಕ್ಕನ್ನು ತಯಾರಿಸುವುದು ಹೇಗೆ ಎಂಬ ತಾಂತ್ರಿಕ ಮಾಹಿತಿ ಅವರಲ್ಲಿ ಇತ್ತು. ಚಿತ್ರದುರ್ಗದ ಬಳಿಯ ಗಟ್ಟಿ ಹೊಸಳ್ಳಿ ಎಂಬ ಊರಿನ ಕಮ್ಮಾರರೇ ತಯಾರಿಸುತ್ತಿದ್ದ ವಿಶೇಷ ಉಕ್ಕಿನ ಪಟ್ಟಿಗಳು ಸಿರಿಯಾ ದೇಶದ ಡಮಸ್ಕಸ್‌ಗೆ ಹೊಗಿ ಅಲ್ಲಿ ಖಡ್ಗಗಳಾಗಿ 'ಡಮಸ್ಕಸ್ ಖಡ್ಗ' ಎಂದೇ ಹೆಸರು ಪಡೆದು ಮುನ್ನೂರು ವರ್ಷಗಳ ಹಿಂದೆಯೇ ವಿವಿಧ ರಾಷ್ಟ್ರಗಳಿಗೆ ಹೋಗುತ್ತಿದ್ದವು. ತುಕ್ಕು ಹಿಡಿಯದ, ರೇಷ್ಮೆಯ ನವಿರು ದಾರವನ್ನು ಕತ್ತರಿಸಬಹುದಾದಷ್ಟು ಹರಿತಧಾರೆಯ ಡಮಸ್ಕಸ್ ಖಡ್ಗಗಳಿಗೆ ಬಳಸುತ್ತಿದ್ದ ಲೊಹಗಳನ್ನು 'ವೊಲ್ಟ್ಸ್ ಸ್ಟೀಲ್' ಎಂದು ಕರೆಯಲಾಗುತ್ತಿತ್ತು. ಕನ್ನಡ ಮತ್ತು ತೆಲುಗು ಭಾಷೆಯ 'ಉಕ್ಕು' ಎಂಬ ಪದವೇ ಅಲ್ಲಿಗೆ ಹೋಗಿ 'ವೊಲ್ಟ್ಸ್' ಎಂದು ಬದಲಾಗಿದೆಯೆನ್ನಲಾಗುತ್ತಿದೆ. ಟಿಪ್ಪೂ ಸುಲ್ತಾನ ಬಳಸುತ್ತಿದ್ದ ಅಂಥ ಡಮಸ್ಕಸ್ ಖಡ್ಗದಲ್ಲಿ ನ್ಯಾನೊ ಕಾರ್ಬನ್ ಸುರುಳಿಗಳಿವೆ ಎಂದು ನೊಬೆಲ್ ವಿಜ್ಞಾನಿ ರಾಬರ್ಟ್ ಕರ್ಲ್ ಎಂಬಾತ ೨೦೦೮ರಲ್ಲಿ ವಿಶಾಖಪಟ್ಟಣದ ಸೈನ್ಸ್ ಕಾಂಗ್ರೆಸ್ ಸಮಾವೇಶದಲ್ಲಿ ಹೇಳಿದುದು ಸಾಕಷ್ಟು ಸಂಚಲನವನ್ನು ಮೂಡಿಸಿತ್ತು. ನಮ್ಮ ಕಮ್ಮಾರರು ತಯಾರಿಸಿದ ಉಕ್ಕು ವಿದೇಶಕ್ಕೆ ಹೋದ ನಂತರವೇ ಪ್ರಸಿದ್ಧಿ ಪಡೆದಿದ್ದು, ಅದರ ಮಹತ್ವ ವಿದೇಶೀ ವಿಜ್ಞಾನಿಯಿಂದಲೇ ಬಹಿರಂಗವಾಗಿದ್ದು ನಮಗೊಂದು ಪಾಠವಾಗಬೇಕಿತ್ತು. ಇತಿಹಾಸದ ಪುಟಗಳಲ್ಲಿ, ಅಷ್ಟೇಕೆ ಪುಟಗಳೇ ಇಲ್ಲದೆ ಕೇವಲ ಮಾತುಗಳಲ್ಲಿ, ಸ್ಥಳಪುರಾಣಗಳಲ್ಲಿ ಅವಿತಿರುವ

ಅಂಥ ದೇಸಿ ಜ್ಞಾನವನ್ನು ಹೊರಕ್ಕೆ ತೆಗೆದು ದಾಖಲಿಸಲೆಂದೇ ಕನ್ನಡ ವಿಶ್ವವಿದ್ಯಾಲಯ ಹೊಸದಾಗಿ 'ದೇಸಿ ವಿಜ್ಞಾನ' ವಿಭಾಗವನ್ನು ಆರಂಭಿಸಲು ಹೊರಟಿದೆ. ಅದರ ಮಹತ್ವ ನಮಗೆಲ್ಲರಿಗೆ ಮನದಟ್ಟಾಗಬೇಕಾಗಿದೆ.

ನಮ್ಮವರ ಪುರಾತನ ಜ್ಞಾನ ಪರಂಪರೆ ವಿದೇಶಕ್ಕೆ ಹೋಗಿ ಮೆರುಗು ಪಡೆದ ಅನೇಕ ಉದಾಹರಣೆಗಳು ಕೇವಲ ಲೋಹವಿದ್ಯೆ, ಯೋಗವಿದ್ಯೆಗಳಲಷ್ಟೇ ಅಲ್ಲ, ಗಿಡಮೂಲಿಕೆಗಳ ವಿಚಾರದಲ್ಲೂ ಸಿಗುತ್ತವೆ. ನಮ್ಮ ನಾಡಿನ ನಿಸರ್ಗದಲ್ಲಿ ಸರ್ಪಗಂಧಿ ಎಂಬ ಮೂಲಿಕೆ ಅದೇಷ್ಟೋ ಕಡೆ ತಾನೆ ತಾನಾಗಿ ಬೆಳೆಯುತ್ತಿದೆ. ಅನಾದಿ ಕಾಲದಿಂದ ನಮ್ಮ ನಾಟಿವೈದ್ಯರು, ಹಿರಿಯಜ್ಜಿಯರು ಅದರ ಬೇರನ್ನು ಔಷಧ ಮೂಲಿಕೆಯನ್ನಾಗಿ ಬಳಸುತ್ತಿದ್ದರು. ಮನೆಯಲ್ಲಿ ಯಾರೇ ಪಿತ್ತ ಪ್ರಕೋಪ, ಅತಿ ಆಯಾಸ, ನಿದ್ರಾಹೀನತೆಯಿಂದ ಬಳಲುತ್ತಿದ್ದರೆ ಅಜ್ಜಿ ಹಿತ್ತಲಿಗೆ ಹೋಗಿ ಸರ್ಪಗಂಧಿ ಸಸ್ಯದ ಬೇರನ್ನು ಕಿತ್ತುತಂದು ತೇಯ್ದು ಲಿಂಬೆರಸದೊಂದಿಗೆ ನೆಕ್ಕಿಸುತ್ತಿದ್ದರು. ಅವರಿವರೇಕೆ, ಮಹಾತ್ಮ ಗಾಂಧಿ ಕೂಡ ನಿದ್ರಾಹೀನತೆ ಉಂಟಾದಾಗ ಸರ್ಪಗಂಧಿ ಮೂಲಿಕೆಯ ಕಷಾಯವನ್ನು ಸೇವಿಸುತ್ತಿದ್ದರು. ಪಶ್ಚಿಮದ ಔಷಧ ಕಂಪನಿಗಳಿಗೆ ಇದು ಗೊತ್ತಾಗಿದ್ದೆ ತಡ, ಐವತ್ತರ ದಶಕದಲ್ಲಿ ಭಾರತದ ಈ ಮೂಲಿಕೆಗೆ ಭಾರಿ ಬೇಡಿಕೆ ಬಂದು ನಮ್ಮಲ್ಲಿಂದ ಅದರ ಸಾವಿರಾರು ಟನ್‌ಗಟ್ಟಲೆ ಬೇರುಗಳು ಜರ್ಮನಿಗೆ ರಫ್ತಾಗಿ, ಅಲ್ಲಿಯದು 'ಸರ್ಪಾಸಿಲ್' ಹೆಸರಿನ ಮಾತ್ರೆಯಾಗಿ ಜಗತ್ತಿಗೆಲ್ಲಾ ಪ್ರಸಾರವಾಯಿತು. ನಮ್ಮ ಔಷಧ ಅಂಗಡಿಗಳಿಗೂ ಬರತೊಡಗಿತು. ನಮ್ಮ ಹಿತ್ತಲಲ್ಲೇ ಇರುವ ಈ ಔಷಧವನ್ನು ನಾವು ಕ್ಲಿನಿಕ್ಕಿಗೆ ಹೋಗಿ ಡಾಕ್ಟರ್‌ರ ಆದೇಶ ಮೇರೆಗೆ ಔಷಧಿ ಅಂಗಡಿಗಳಲ್ಲಿ ಕೊಳ್ಳುವಂತಾಯಿತು. ಈ ಮೂಲಿಕೆ ಈಗ ನಮ್ಮಲ್ಲಿ ಮೂಲೆಗುಂಪಾಗಿದೆ. ಸರ್ಪಗಂಧಿ ಇರಲಿ, ಅಶ್ವಗಂಧಿ ಇರಲಿ ಇಂದಿನ ಮಕ್ಕಳಿಗೆ ಆಗಿರಲಿ, ಹಿರಿಯರಿಗೂ ಅದು ಎಲ್ಲಿ ಇದೆ ಎಂದು ಗೊತ್ತಾಗುವುದಿಲ್ಲ. ನಾವು ಅದನ್ನು ತುಳಿಯುತ್ತಲೇ ಓಡಾಡುತ್ತಿದ್ದರೂ ನಮಗೆ ಅದರ ಇರುವು ಗೊತ್ತಾಗದಷ್ಟು ನಾವು ಕುರುಡರಾಗಿದ್ದೇವೆ.

ಈಗಂತೂ ಆಧುನೀಕರಣ, ನಗರೀಕರಣದ ಪ್ರಕ್ರಿಯೆಗಳಿಂದಾಗಿ ನಾವು ನಿಸರ್ಗದಿಂದ ದೂರವಾಗುತ್ತಿದ್ದೇವೆ. ನಿಸರ್ಗದ ನಡುವೆಯೇ ಬದುಕುತ್ತಿರುವ ವನವಾಸಿಗಳು, ಗುಡ್ಡಗಾಡು ಜನಾಂಗದವರು, ಬುಡಕಟ್ಟು ಜನದವರು, ಮೀನುಗಾರರು, ನಾಟಿವೈದ್ಯರು ಈಗಿನ ಜಾಗತೀಕರಣದ ಸುನಾಮಿಯಲ್ಲಿ ಸಿಕ್ಕು ತಮ್ಮದೆಲ್ಲವನ್ನು ಕಳೆದುಕೊಳ್ಳುತ್ತಿದ್ದಾರೆ. ದಿನದಿನಕ್ಕೂ ದೇಸೀ ಜ್ಞಾನ ಪರಂಪರೆಗಳು ನಾಶವಾಗುತ್ತಿವೆ.

ಬತ್ತಿಹೋಗುತ್ತಿರುವ ದೇಸಿಜ್ಞಾನಧಾರೆ

ಐದು ಪ್ರಮುಖ ಕಾರಣಗಳಿಂದಾಗಿ ಇಂದು ನಮ್ಮ ಸ್ಥಳೀಯರ ಜ್ಞಾನ ಪರಂಪರೆ ಅತಿ ಶೀಘ್ರವಾಗಿ ಶಿಥಿಲವಾಗುತ್ತಿದೆ. ಈ ಕಾರಣಗಳನ್ನು ಪಟ್ಟಿ ಮಾಡುವುದಾದರೆ–

೧. **ಅರಣ್ಯ ಮತ್ತು ಪರಿಸರ ನಾಶ:** ಗಣಿಗಾರಿಕೆ, ಆಣೆಕಟ್ಟು ನಿರ್ಮಾಣ, ಹೆದ್ದಾರಿ, ಕೃಷಿಗಾಗಿ ಒತ್ತುವರಿ, ನಗರ ನಿರ್ಮಾಣವೇ ಮುಂತಾದ ಚಟುವಟಿಕೆಗಳಿಂದ ಅಪಾರ ಪ್ರಮಾಣವಾದ ಅರಣ್ಯ ನಾಶವಾಗುತ್ತಿದೆ, ಜೀವಿ ವೈವಿಧ್ಯ ನಾಶವಾಗುತ್ತಿದೆ. ಕೊಳ್ಳಗಳು ಬತ್ತುತ್ತಿವೆ, ಕೆರೆಗಳು ಕಣ್ಮರೆಯಾಗುತ್ತಿವೆ. ಅಳಿದುಳಿದ ಅರಣ್ಯಗಳಲ್ಲಿ ಅಕೇಶಿಯಾ, ನೀಲಗಿರಿಯಂಥ ಏಕಜಾತಿಯ ಸಸ್ಯಗಳನ್ನು ವಿಶಾಲ ಕ್ಷೇತ್ರಗಳನ್ನು ಬೆಳೆಸಲಾಗುತ್ತಿದೆ. ಈಚಲು ಮರಗಳು, ಮುಕ್ಕಡಕ ಪೊದೆಗಳು, ತುಡುವಿ ಜೇನುಗಳು ಕಣ್ಮರೆಯಾಗುತ್ತಿವೆ. ಕೆರೆಗಳು ನಾಶವಾದರೆ ಜಲಪರಿಸರದ ಜೀವಸಂಕುಲಗಳಂತೂ ನಾಶವಾಗುತ್ತದೆ. ಜೊತೆಗೆ ಕುಂಬಾರಿಕೆಗೆ ಬೇಕಾಗಿದ್ದ ಜೇಡಿ ಮಣ್ಣು ಕೂಡ ಸಿಗದಂತಾಗುತ್ತದೆ. ಚನ್ನಪಟ್ಟಣದ ಬಳಿ ಕುಂಬಾರರು ಸುಶ್ರಾವ್ಯ ನಾದ ಹೊಮ್ಮಿಸಬಲ್ಲ ಮಣ್ಣಿನ ಗಂಟೆಗಳನ್ನು ಮಾಡುತ್ತಿದ್ದರು. ಹದಿನೈದು ವರ್ಷಗಳ ಹಿಂದೆ ನಾನೇ ಕೆಲವನ್ನು ಖರೀದಿಸಿ, ಸ್ವಿತ್ಸರ್ಲೆಂಡಿನಿಂದ ಬಂದ ಅತಿಥಿಗಳಿಗೆ ಉಡುಗೊರೆಯಾಗಿ ಕಳಿಸಿದ್ದೆ. ಈಚಿನ ವರ್ಷಗಳಲ್ಲಿ ಅಂತಹ ಮಣ್ಣಿನ ಗಂಟೆಗಳನ್ನು ತಯಾರಿಸುವವರೇ ಎಲ್ಲೋ ವಲಸೆ ಹೋಗಿದ್ದಾರೆ. ಎಲ್ಲಿ ಹೋದರೊ ಗೊತ್ತಿಲ್ಲ. ಸಹಜವಾಗಿ, ಅವರೊಂದಿಗಿನ ಆ ಅಪೂರ್ವ ಜ್ಞಾನವೂ ಹೊರಟುಹೋಗಿದೆ.

೨. **ಆಧುನಿಕ ಕೃಷಿ ವಿಧಾನ:** ಹೈಬ್ರಿಡ್ ತಳಿಗಳು, ರಸಾಯನ ಒಳಸುರಿಗಳು, ಕೀಟನಾಶಕಗಳ ವಿಪರೀತ ಬಳಕೆಯಿಂದಾಗಿ ನೈಸರ್ಗಿಕ ತಳಿಗಳು ನಾಪತ್ತೆಯಾಗುತ್ತಿವೆ. ಕೊಡುಗು, ಚಿಕ್ಕಮಗಳೂರಿನ ಕಾಫಿ ತೋಟಗಳಲ್ಲಿ ಕಳೆನಾಶಕ ಕೆಮಿಕಲ್‌ಗಳ ಬಳಕೆ ವರ್ಷವರ್ಷಕ್ಕೆ ಹೆಚ್ಚುತ್ತಿದೆ. 'ಕಳೆ' ಎಂದು ನಾವು ಭಾವಿಸುವ ಅನೇಕ ಗಿಡಮೂಲಿಕೆಗಳ ವಂಶವೇ ನಿರ್ನಾಮವಾಗುತ್ತಿದೆ. ಇತರ ಕೀಟನಾಶಕ ವಿಷಗಳ ಅತಿ ಬಳಕೆಯಿಂದಾಗಿ ಪರಾಗಸ್ಪರ್ಶ ಕ್ರಿಯೆ ಸ್ಥಗಿತಗೊಂಡು ಅದೆಷ್ಟು ಮೂಲಿಕೆ ಸಂತತಿಗಳು ನಿರ್ನಾಮವಾಗುತ್ತಿವೆಯೋ ಯಾರೂ ಲೆಕ್ಕ ಇಟ್ಟವರಿಲ್ಲ. ಆಯುರ್ವೇದ ಪಂಡಿತರಿಗೆ, ನಾಟಿವೈದ್ಯರಿಗೆ ನಸುಗುನ್ನಿ ಕಾಯಿ (ಕಾಪಿಕಾಚು ಅಥವಾ ಮಾಕುನ್ನಾ ಪ್ಯುರೆನ್ಸಿಸ್) ತುಂಬ ಮಹತ್ವದ್ದಾಗಿತ್ತು. ಅದು ಪಾರ್ಕಿನ್ಸನ್ ಕಾಯಿಲೆಗೆ ಉತ್ತಮ ಔಷಧವೆಂದು ವಿದೇಶದಲ್ಲಿ ಪ್ರತೀತಿ ಪಡೆದ ಮೇಲಂತೂ ನಸುಗುನ್ನಿ ಬಳ್ಳಿಯನ್ನು ಕೃಷಿಭೂಮಿಯಲ್ಲಿ ಬಳಸುವ ಯತ್ನಗಳು ನಡೆದವು.

ಕೊಯ್ಲಿಗೆ ಸುಲಭವಾಗುವಂತೆ, ಇಳುವರಿ ಹೆಚ್ಚಿಸುವಂತೆ ಸಸ್ಯವಿಜ್ಞಾನಿಗಳು ಸಂಕರತಳಿಯನ್ನು ಸೃಷ್ಟಿ ಮಾಡಿದರು. ವೆಲ್ವೆಟ್ ಬೀನ್ಸ್ ಎಂಬ ಹೆಸರಿನಲ್ಲಿ ಅದನ್ನು ಸಾಕಷ್ಟು ಕಡೆ ಬೆಳೆಸಲಾಗುತ್ತಿದೆ. ಆದರೆ ಅದರಲ್ಲಿ ಔಷಧೀಯ ಗುಣ ಉಳಿದಿಲ್ಲವೆಂದು ಕೆಲವು ವೈದ್ಯರು ನಸುಗುನ್ನಿಯ ಬಳಕೆಯನ್ನೇ ಕೈಬಿಡುತ್ತಿದ್ದಾರೆ. ಇನ್ನು, ಕುಲಾಂತರಿ ತಂತ್ರಜ್ಞಾನಕ್ಕೆ ಮಾನ್ಯತೆ ಸಿಕ್ಕು ಅದು ಬಳಕೆಗೆ ಬಂದ ಮೇಲೆ ಯಾವ ಯಾವ ಸಸ್ಯಗಳು ತಮ್ಮ ಔಷಧೀಯ ಗುಣಗಳನ್ನು ಕಳೆದು ಕೊಳ್ಳುತ್ತವೆಯೊ ಹೇಳುವಂತಿಲ್ಲ.

೩. ಶಿಕ್ಷಣ ಮಾಲಿನ್ಯ, ಸಾಂಸ್ಕೃತಿಕ ಮಾಲಿನ್ಯ: ತೀರ ಹಿಂದುಳಿದ, ಬುಡಕಟ್ಟು ಜನಾಂಗದವರನ್ನು ಸುಶಿಕ್ಷತರನ್ನಾಗಿ ಮಾಡುವ ಭರದಲ್ಲಿ, ಕನ್ನಡ ಪಠ್ಯಪುಸ್ತಕಗಳನ್ನೇ ಸೋಲಿಗರ, ಜೇನುಕುರುಬರ, ಹಾಲಕ್ಕಿಗಳ, ಗೌಳಿಗರ ಹಾಗೂ ಮಲೆಕುಡಿಯರ ಮಕ್ಕಳಿಗೂ ಬೋಧಿಸಲಾಗುತ್ತಿದೆ. ಅವರ ಮೂಲಭಾಷೆಯ ಬಳಕೆ ಕಡಿಮೆಯಾಗುತ್ತಿದೆ. ನಿಸರ್ಗದೊಂದಿಗೆ ಸದಾ ಬೆರೆತಿದ್ದ ಬುಡಕಟ್ಟು ಜನರು ತಮ್ಮದೇ ಭಾಷೆಯಲ್ಲಿ ಅದೆಷ್ಟೋ ಗಿಡಮೂಲಿಕೆಗಳನ್ನು, ಗಡ್ಡೆಗೆಣಸುಗಳನ್ನು, ಪ್ರಾಣಿಪಕ್ಷಿಗಳನ್ನು, ಜಲಚರಗಳನ್ನು ಗುರುತಿಸುತ್ತಿದ್ದರು. ಅಂಥವರ ಮಕ್ಕಳು ಶಾಲೆಯಲ್ಲಿ ಬೇರೆಯದೇ ಶಿಕ್ಷಣ ಪಡೆಯುವುದರಿಂದ ನೆಲಮೂಲ ಜ್ಞಾನ ಅವರಲ್ಲಿ ನಶಿಸಿ ಹೋಗುತ್ತಿದೆ. ಭಾಷಾವೈವಿಧ್ಯ ನಾಶವಾಗುತ್ತ ಹೋದರೆ ಜೀವವೈವಿಧ್ಯವೂ ಕ್ರಮೇಣ ನಾಶವಾಗುತ್ತದೆ. ಕಾಲಬುಡದಲ್ಲೇ ಇದ್ದರೂ ಕಣ್ಣಿಗೆ ಕಾಣದಂತಾಗುತ್ತವೆ. ಹಾಗೆ ಆಗದಂತೆ ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಮಕ್ಕಳಿಗೆಂದು ಅವರದೇ ಸಂಸ್ಕೃತಿ–ಪರಂಪರೆಯನ್ನು ಆಧರಿಸಿದ ಪಠ್ಯಗಳನ್ನು ರೂಪಿಸಲಾಗಿದ್ದು, ಅದನ್ನೇ ಬೋಧಿಸಲು ಶಿಕ್ಷಣ ಇಲಾಖೆ ಅನುಮತಿ ನೀಡಿದೆ. ಆದರೆ ಇತರ ಬುಡಕಟ್ಟು ಮಕ್ಕಳಿಗೆ ಆ ಅದೃಷ್ಟ ಇಲ್ಲವಾಗಿದೆ.

೪. ನಗರಗಳ ಕಡೆ ವಲಸೆ: ಗ್ರಾಮೀಣ ಕುಶಲ ಕರ್ಮಿಗಳು, ಸೂಲಗಿತ್ತಿಯರು, ನಾಟಿವೈದ್ಯರು, ಕಮ್ಮಾರರು, ಕುಂಬಾರರು, ಮೇದರು ಅವರಿವರೆನ್ನದೆ ಬಹುದೊಡ್ಡ ಪ್ರಮಾಣದಲ್ಲಿ ಹಳ್ಳಿಯ ಜನರು 'ಪರಿಸರ ನಿರಾಶ್ರಿತ'ರಾಗಿ ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ಅವರ ನೆಲಮೂಲ ಜ್ಞಾನವನ್ನೆಲ್ಲ ಅವರು ತ್ಯಜಿಸಿಯೇ ಬರಬೇಕಾಗುತ್ತದೆ. ಒಂದು ಪೀಳಿಗೆಯ ನಂತರ ಅವೆಲ್ಲ ಜ್ಞಾನವೂ ಕಣ್ಮರೆಯಾಗುತ್ತದೆ.

ಪರಭಾರೆಯಾಗುತ್ತಿರುವ ಪರಂಪರಾಗತ ಜ್ಞಾನ

ಶಿಥಿಲವಾಗುವುದು, ನಶಿಸಿಹೋಗುವುದು ಒಂದು ಬಗೆಯ ನಷ್ಟವಾದರೆ, ನಮ್ಮ ಪರಂಪರಾಗತ ಜ್ಞಾನ ಪರಭಾರೆಯಾಗಿ ಯಾವುದೋ ದೇಶದ ಕಂಪನಿಯೊಂದು ಅಂಥ ಜ್ಞಾನದ ಹಕ್ಕುಸ್ವಾಮ್ಯವನ್ನು ಪಡೆಯುವ ಸಂಭವ ದಿನದಿನಕ್ಕೆ ಹೆಚ್ಚುತ್ತಿದೆ. ಅದು ಇನ್ನೊಂದು ಬಗೆಯ ನಷ್ಟವೆಂದೇ ಹೇಳಬೇಕು. ಬೇವು, ಅರಿಶಿಣ, ಬಾಸ್ಮತಿ ಅಕ್ಕಿಗೆ ೧೯೯೫ರಲ್ಲಿ ವಿದೇಶಿ ಪೇಟೆಂಟ್ ಸಿಕ್ಕಿದ್ದು ಗೊತ್ತಾಗಿ ಡಾ. ವಂದನಾ ಶಿವ, ಡಾ. ಸುಮನ್ ಸಹಾಯ್‌ರಂಥ ಕ್ರಿಯಾಶೀಲ ವ್ಯಕ್ತಿಗಳು ಪ್ರಚಾರಾಂದೋಲನ ನಡೆಸಿದ ಪರಿಣಾಮವಾಗಿ ಕೇಂದ್ರ ಸರಕಾರ ಎಚ್ಚೆತ್ತು, ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ಖಟ್ಲೆ ಹಾಕಿ, ಅವು ನಮ್ಮವೇ ಎಂಬುದನ್ನು ಸಾಬೀತುಪಡಿಸಲೆಂದು ಪುರಾಣ ಗ್ರಂಥಗಳ ಉಲ್ಲೇಖಗಳನ್ನು ನೀಡಬೇಕಾಯಿತು. ಬೇವು, ಅರಿಶಿಣಕ್ಕೆ ಅಷ್ಟೆಲ್ಲ ಮಹತ್ವ ಇದಯೆಂಬುದು(ಬೇರೆಯವರು ಲಪಟಾಯಿಸ ಹೊರಟಾಗಲೇ) ನಮ್ಮ ಆಧುನಿಕ ಪ್ರಜೆಗಳಿಗೆ ಮೊದಲ ಬಾರಿ ಗೊತ್ತಾಯಿತು.

ಈ ಬಗೆಯ ನಿಸರ್ಗಜ್ಞಾನ ನಶಿಸಿ ಹೋಗದಂತೆ ಅಥವಾ ಪರಭಾರೆಯಾಗದಂತೆ ತಡೆಯಲೆಂದು ೨೦೦೧ರಲ್ಲಿ ರಾಷ್ಟ್ರೀಯ ಮಟ್ಟದಲ್ಲಿ 'ಪರಂಪರಾಗತ ಜ್ಞಾನಗಳ ಡಿಜಿಟಲ್ ಗ್ರಂಥಾಲಯ'(ಟ್ರೆಡಿಶನಲ್ ನಾಲೆಜ್ ಡಿಜಿಟಲ್ ಲೈಬ್ರರಿ ಟಿಕೆಡಿಎಲ್) ಎಂಬ ವ್ಯವಸ್ಥೆಯನ್ನು ರೂಪಿಸಲಾಗಿದೆ. ಆಯುರ್ವೇದ, ಯುನಾನಿ, ಸಿದ್ಧ, ಯೋಗವಿದ್ಯೆ ಮತ್ತು ನಿಸರ್ಗ ಚಿಕಿತ್ಸೆಗೆ ಸಂಬಂಧಿಸಿದ ೧೪೮ ಪುರಾತನ ಗ್ರಂಥಗಳಲ್ಲಿರುವ ಮೂರೂವರೆ ಕೋಟಿ ಪುಟಗಳಷ್ಟು ಮಾಹಿತಿಗಳನ್ನು ಕಂಪ್ಯೂಟರಿಗೆ ಸೇರಿಸಲಾಗಿದೆ. ಮೂಲ ಸಂಸ್ಕೃತ, ಹಿಂದಿ, ಅರೇಬಿಕ್, ಪರ್ಶಿಯನ್, ಉರ್ದು, ತಮಿಳು ಭಾಷೆಗಳಿಂದ ಇಂಗ್ಲಿಷ್, ಜರ್ಮನ್, ಫ್ರೆಂಚ್, ಸ್ಪ್ಯಾನಿಷ್ ಮತ್ತು ಜಪಾನಿ ಭಾಷೆಗಳಿಗೆ ತರ್ಜುಮೆ ಮಾಡಿಸಿ, ೨೦೦೬ರಲ್ಲಿ ಯುರೋಪ್, ಅಮೆರಿಕ ಮತ್ತು ಆಗ್ನೇಯ ಏಷ್ಯದ ಪ್ರಮುಖ ಪೇಟೆಂಟ್ ಕಚೇರಿಗಳಿಗೆ ಲಭ್ಯವಾಗುವಂತೆ ಮಾಡಲಾಗಿದೆ. ಆದರೆ ಅಷ್ಟರೊಳಗೇ ೧೩೧ ಬಗೆಯ ಯೋಗಾಸನಗಳು ಬೇರೆ ದೇಶಗಳಲ್ಲಿ ಹಕ್ಕುಸ್ವಾಮ್ಯ ಪಡೆದಿದ್ದವು. ಗಿಡಮೂಲಿಕೆಗಳಿಗೆ ಹಾಗೂ ಇತರ ಜ್ಞಾನಶಾಖೆಗಳಿಗೆ ಸಂಬಂಧಿಸಿದಂತೆ ೭೪ ಪೇಟೆಂಟ್‌ಗಳು ಯುರೋಪ್ ಅಮೆರಿಕಾಗಳಲ್ಲಿ ದಾಖಲಾಗಿದ್ದವು. ಟಿಕೆಡಿಎಲ್‌ನಿಂದಾಗಿ ಅಂಥ ಪೇಟೆಂಟ್‌ಗಳೆಲ್ಲ ಅಸಿಂಧುವೆಂದೂ ಅವೆಲ್ಲ, ಮೂಲತಃ ಭಾರತೀಯವೇ ಎಂದು ಸಾಬೀತಾಗಿವೆ.

ಇದು ಶ್ಲಾಘನೀಯವೇ ಹೌದಾದರೂ ಇವೆಲ್ಲ ನಮ್ಮ ಲಿಖಿತ ಪರಂಪರೆಗೆ ಸಂಬಂಧಿಸಿದವಾಗಿವೆ. ಸಸ್ಯಜ್ಞಾನ ಅನ್ನಿ, ವೃಕ್ಷಾಯುರ್ವೇದ ಅನ್ನಿ, ವೈದ್ಯವಿಜ್ಞಾನ ಅನ್ನಿ, ಜ್ಯೋತಿರ್ವಿಜ್ಞಾನ ಅನ್ನಿ, ಲೋಹಶಾಸ್ತ್ರವೆನ್ನಿ, ನಾಡಿಶಾಸ್ತ್ರವೆನ್ನಿ ಅವುಗಳಲ್ಲಿ ಕೆಲವಷ್ಟು ಆರ್ಯರ ಆಗಮನದಿಂದಾಗಿ ನಮ್ಮ ಸಂಸ್ಕೃತಿಯಲ್ಲಿ ಸೇರಿವೆ. ಕೆಲವು ಹಂತದವರೆಗೆ ಅವು ಶಿಸ್ತಿನ ಜ್ಞಾನವಾಗಿ,

ಲಿಖಿತರೂಪದಲ್ಲೂ ಸಾಹಿತ್ಯಕ್ಕೆ ಸೇರ್ಪಡೆಯಾಗಿವೆ. ಇನ್ನು ಕೆಲವು ನೆಲಮೂಲ ಜ್ಞಾನಗಳು ವಿಶೇಷವಾಗಿ ಬುಡಕಟ್ಟು ಜನಾಂಗದ ಮೌಖಿಕ ಜ್ಞಾನ ಪರಂಪರೆಗಳು ಅಕ್ಷರ ರೂಪದಲ್ಲಿ ಇಲ್ಲವೆ ಡಿಜಿಟಲ್ ರೂಪದಲ್ಲಿ ದಾಖಲಾಗಿಲ್ಲ. ಅವುಗಳನ್ನು ಆದಷ್ಟು ಶೀಘ್ರವಾಗಿ, ವ್ಯವಸ್ಥಿತವಾಗಿ ದಾಖಲಿಸದೇ ಇದ್ದರೆ ನಮ್ಮ ಪರಂಪರಾಗತ ಜ್ಞಾನವೆಲ್ಲ ಒಂದೋ ನಶಿಸಿ ಹೋಗುತ್ತವೆ, ಇಲ್ಲವೆ ಕಳ್ಳಮಾರ್ಗದ ಮೂಲಕ ಪರಭಾರೆಯಾಗುತ್ತದೆ. ಇಂಥ ಒಂದು ತಳಿಚೌರ್ಯದ ಕೆಲಸ ನಮ್ಮ ನಾಡಿನಲ್ಲೇ, ನಮ್ಮ ವಿಜ್ಞಾನಿಗಳ ನೆರವಿನಿಂದಲೇ ನಡೆದಿದೆ: ಉಡುಪಿಯ 'ಮುಟ್ಟುಗುಳ್ಳ' ಹೆಸರಿನ ಬದನೆಯ ತಳಿಯನ್ನು ಅಮೆರಿಕ ಮೂಲದ ಮೊನ್ಸಾಂಟೊ ಕಂಪನಿ ಹಾಗೂ ಅದರ ಭಾರತೀಯ ಪಾಲುದಾರ 'ಮಹಿಕೊ' ಕಂಪನಿಗಳು ಎತ್ತಿತಂದು ನಮ್ಮದೇ ಕೃಷಿ ವಿಶ್ವವಿದ್ಯಾಲಯದ ತಜ್ಞರ ಸಹಕಾರದಿಂದ ಕುಲಾಂತರಿ ತಳಿಯನ್ನಾಗಿ ಮಾರ್ಪಡಿಸಿದರು. ಭಾರತ ಸರಕಾರದ ಜೀವವೈವಿಧ್ಯ ಅಧಿನಿಯಮ ೨೦೦೨ರ ಪ್ರಕಾರ ಹಾಗೆಲ್ಲ ಅನುಮತಿ ಇಲ್ಲದೆ ವಾಣಿಜ್ಯ ಉದ್ದೇಶಕ್ಕಾಗಿ ನಮ್ಮ ಜೈವಿಕ ಸಂಪತ್ತನ್ನು ಎತ್ತಿ ಬಳಸುವುದು ಕಾನೂನಿನ ದೃಷ್ಟಿಯಲ್ಲಿ ಅಪರಾಧವೆನಿಸುತ್ತದೆ. ಆದ್ದರಿಂದಲೇ ಕರ್ನಾಟಕದ ಜೀವವೈವಿಧ್ಯ ಮಂಡಳಿ ಮುಟ್ಟುಗುಳ್ಳದ ತಳಿ ಮಾರ್ಪಾಟಿಗೆ ಕೈಹಾಕಿದ ಕಂಪನಿಗಳ ಮೇಲೆ, ವಿಜ್ಞಾನಿಗಳ ಮೇಲೆ ಖಟ್ಲೆ ಹಾಕಿದೆ. ಪ್ರಕರಣ ಇದೀಗ ನ್ಯಾಯಾಲಯದಲ್ಲಿದೆ. ಮುಟ್ಟುಗುಳ್ಳ ಅಥವಾ ಅಂಥ ಅನೇಕಾನೇಕ ನಾಟಿ ತರಕಾರಿಗಳ ಬಗ್ಗೆ ನಮ್ಮ ಪುರಾತನ ಗ್ರಂಥಗಳಲ್ಲಿ ಉಲ್ಲೇಖವೇ ಇರಲಿಕ್ಕಿಲ್ಲ. ಅಂಥ ಹಣ್ಣು–ತರಕಾರಿಗಳ ಅಥವಾ ಔಷಧಿ ಮೂಲಿಕೆಗಳ ಮಹತ್ವ ಏನೆಂಬುದು ಗ್ರಾಮೀಣ ನಿವಾಸಿಗಳಿಗೆ ಅದರಲ್ಲೂ ಹೆಚ್ಚಿನ ಪಾಲು ಮಹಿಳೆಯರ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಪರಂಪರಾಗತವಾಗಿ ಮೌಖಿಕವಾಗಿ ಬಂದ ಜ್ಞಾನವೇ ಆಗಿದೆ. ಇಂಥ ಮೌಖಿಕ ಜ್ಞಾನವನ್ನೂ ದಾಖಲಿಸಬೇಕೆಂದು ರಾಷ್ಟ್ರೀಯ ಜೀವವೈವಿಧ್ಯ ಮಂಡಲಿ ನಿರ್ಧರಿಸಿದೆ. ನಿಸರ್ಗದ ಮಡಿಲಲ್ಲಿರುವ ಎಲ್ಲ ಬಗೆಯ ಜೈವಿಕ ಸಂಪತ್ತಿನ ದಾಖಲೀಕರಣ ಆಗಬೇಕೆಂದು ನಿರ್ಣಯಿಸಲಾಗಿದೆ. ಕರ್ನಾಟಕದ ಜೀವವೈವಿಧ್ಯ ಮಂಡಲಿಯೂ ರಾಜ್ಯದ ಪ್ರತಿಯೊಂದು ಪಂಚಾಯಿತಿದಲ್ಲೂ ಜೀವವೈವಿಧ್ಯ ಸಮಿತಿಯೊಂದು ಇರಬೇಕೆಂದು ಅದು ತನ್ನ ವ್ಯಾಪ್ತಿಯ ಎಲ್ಲ ಜೀವಸಂಪತ್ತನ್ನೂ ದಾಖಲಿಸಿ ವರ್ಗೀಕರಿಸಬೇಕೆಂದೂ ಆದೇಶ ನೀಡಿದೆ. ಆದರೆ ಪಂಚಾಯ್ತಿ ಮಟ್ಟದಲ್ಲಿ ಸಸ್ಯಗಳ ಶಾಸ್ತ್ರೀಯ ಜ್ಞಾನದ ಅಭಾವ, ವನ್ಯ ಪ್ರಾಣಿಪಕ್ಷಿಗಳ, ಜೇನುಜೀರುಂಡೆಗಳ ಸಮೀಕ್ಷೆ ನಡೆಸಬಲ್ಲ ಪರಿಣತರ ಅಭಾವದಿಂದಾಗಿ ಬಹಳಷ್ಟು ಪಂಚಾಯಿತಿಗಳಲ್ಲಿ ಈ ಸಮಿತಿಗಳು ಕಾರ್ಯರೂಪಕ್ಕೆ ಬಂದಿಲ್ಲ; ದಾಖಲೀಕರಣ ನಡೆಯುತ್ತಿಲ್ಲ. ಈ ದೃಷ್ಟಿಯಿಂದ ಕನ್ನಡ ವಿಶ್ವವಿದ್ಯಾಲಯ 'ದೇಸಿ ವಿಜ್ಞಾನ' ವಿಭಾಗವನ್ನು ಆರಂಭಿಸುತ್ತಿರುವುದು ಸಮಯೋಚಿತವೇ ಸರಿ. ನಮ್ಮ ನೆಲದ ಮೌಖಿಕ ಜ್ಞಾನವನ್ನು ದಾಖಲಿಸುವ ನಿಟ್ಟಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಕರ್ನಾಟಕದ ಜೀವವೈವಿಧ್ಯ ಮಂಡಲಿಯ ಜೊತೆಗೆ ಕೈಜೋಡಿಸಬಹುದಾಗಿದೆ.

ಜ್ಞಾನ ಮತ್ತು ವಿಜ್ಞಾನದ ಜಿಜ್ಞಾಸೆ

'ದೇಸಿ ವಿಜ್ಞಾನ' ಎಂಬ ಹೆಸರಿನೊಂದಿಗೆ ಹೊಸ ವಿಭಾಗವೊಂದು ಆರಂಭವಾದಾಗ ನಮ್ಮ ನೆಲದಲ್ಲಿನ 'ಜ್ಞಾನ' ಯಾವುದು, 'ವಿಜ್ಞಾನ' ಯಾವುದು, 'ತಂತ್ರಜ್ಞಾನ' ಯಾವುದು ಎಂಬುದನ್ನು ಪ್ರತ್ಯೇಕಿಸಿ ನೋಡುವ ಜಟಿಲ ಸಮಸ್ಯೆಯೊಂದು ಎದುರಾಗುತ್ತದೆ. ಉದಾಹರಣೆಗೆ, ಕೇರಳದ ಕಾಣಿ ಬುಡಕಟ್ಟಿನ ಜನರು 'ಆರೋಗ್ಯ ಪಚ್ಚ' ಎಂಬ ಸಸ್ಯವನ್ನು ಶಕ್ತಿವರ್ಧನೆಗಾಗಿ ಅನಾದಿ ಕಾಲದಿಂದ ಬಳಸುತ್ತಿದ್ದರು. ೧೯೮೭ರಲ್ಲಿ ಲಖ್ನೋದ ಸಸ್ಯವಿಜ್ಞಾನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಪುಷ್ಪಾಂಗದನ್ ಎಂಬ ವಿಜ್ಞಾನಿ ಕೇರಳದ ಅಗಸ್ತ್ಯಮಲೈ ಪರ್ವತಶ್ರೇಣಿಯಲ್ಲಿ ಸಮೀಕ್ಷೆ ಕೈಗೊಂಡಿದ್ದರು. ಅವರಿಗೆ ದಾರಿ ತೋರಿಸಲೆಂದು ಬಂದು ಕಾಣಿ ಬುಡಕಟ್ಟಿನ ಯುವಕನೊಬ್ಬ ಇಲ್ಲಿ ಸಿಕ್ಕ ಈ ಮೂಲಿಕೆಯನ್ನು ಅಗಿಯುತ್ತ ಬೇರೇನೂ ತಿನ್ನದೆ ದಿನಗಳೆಯುತ್ತಿರುವುದು ವಿಜ್ಞಾನಿಯ ಗಮನಕ್ಕೆ ಬಂತು. ಆ ಮೂಲಿಕೆಯನ್ನು ಪ್ರಯೋಗಶಾಲೆಗೆ ಕೊಂಡೊಯ್ಯುವಂತೆ ಹಾಗೂ ಅವರಿಂದ ಬರುವ ಧನರಾಶಿಯೆಲ್ಲ ಆ ಬುಡಕಟ್ಟು ಸಮುದಾಯಕ್ಕೇ ಲಭಿಸುವಂತೆ ವ್ಯವಸ್ಥೆ ಮಾಡಲಾಯಿತು. ೨೦೦೨ರಲ್ಲಿ ವಿಶ್ವಸಂಸ್ಥೆ ಅದೇ ತಾನೆ ಆರಂಭಿಸಿದ ೩೦ ಸಾವಿರ ಡಾಲರ್‌ಗಳ 'ಈಕ್ವೇಟರ್ ಇನಿಶಯೇಟಿವ್ ಬಹುಮಾನ' ಕೂಡ ಈ ಯೋಜನೆಯನ್ನು ಜಾರಿಗೆ ತಂದ ಬುಡಕಟ್ಟು ಮಂಡಳಿಗೆ ಲಭಿಸಿತು.

ಈ ಉಲ್ಲೇಖನೀಯ ಪ್ರಸಂಗದಲ್ಲಿ ಬೆಳಕಿಗೆ ಬಂದಿದ್ದು ಕಾಣಿ ಜನಾಂಗದ ಜ್ಞಾನವೊ, ವಿಜ್ಞಾನವೊ? ಇದು ತತ್ತ್ವಶಾಸ್ತ್ರದ ಪ್ರಮಾಣ–ಪ್ರಮೇಯ ವಿಚಾರಕ್ಕೆ(ಎಪಿಸ್ಟೆಮಾಲಜಿಗೆ) ಸಂಬಂಧಿಸಿದ ಪ್ರಶ್ನೆಯಾದರೂ ಆರೋಗ್ಯ ಪಚ್ಚಾದಲ್ಲಿ ಶಕ್ತಿವರ್ಧಕ ಗುಣಗಳಿವೆ ಎಂಬುದನ್ನು ಪರಂಪರಾಗತ ಜ್ಞಾನವೆಂದೇ ಹೇಳಬೇಕೆ ವಿನಾಃ ವಿಜ್ಞಾನವೆಂದು ಪರಿಗಣಿಸುವಂತಿಲ್ಲ. ಅಂದ ಮಾತ್ರಕ್ಕೇ ಅದು 'ವಿಜ್ಞಾನ' ಅಲ್ಲವೆಂಬ ಕಾರಣವನ್ನು ನೀಡಿ 'ದೇಸಿ ವಿಜ್ಞಾನ ವಿಭಾಗ'ದ ವ್ಯಾಪ್ತಿಯಿಂದ ಹೊರಗಿಡುವುದು ಸರಿಯಾಗುವುದಿಲ್ಲ. ಪರಂಪರೆಯಲ್ಲೇ ಸೇರಿ ಹೋದ, ಆದರೆ ವೈಜ್ಞಾನಿಕ ಮಹತ್ವ ಗೊತ್ತಿಲ್ಲದೆ ಅಥವಾ ಮರೆಯಾಗಿಯೇ ಇರುವ ಅನೇಕ ವೈಜ್ಞಾನಿಕ

ಸಂಗತಿಗಳನ್ನು ನಾವು ಇಂದಿನ ಸಮಾಜದಲ್ಲಿ ಕಾಣುತ್ತೇವೆ. ಕುಷ್ಟಗಿಯ ಅಂಕ್ಲೀಮಠದ ಜಾತ್ರೆಯಲ್ಲಿ ನಡೆಯುವ ಒಂದು ವಿಶಿಷ್ಟ ಕಾರ್ಯಾಚರಣೆಯನ್ನು ನಾವಿಲ್ಲಿ ಉದಾಹರಣೆಯಾಗಿ ಕೊಡಬಹುದು. ಅಲ್ಲಿ ಜಾತ್ರೆಗೆಂದು ರೈತಾಪಿ ಜನರೆಲ್ಲ ಬರುವಾಗ ತಮ್ಮ ನೆಲದಲ್ಲಿ ಬೆಳೆದ ಒಂದರ್ಧ ಕಿಲೋ ಜೋಳ ಅಥವಾ ಸೆಜ್ಜೆಯನ್ನು ಬಟ್ಟೆಯಲ್ಲಿ ಕಟ್ಟಿತಂದು ಅಲ್ಲಿಟ್ಟ ಬಿದಿರಿನ ಬುಟ್ಟಿಗೆ ಹಾಕುತ್ತಾರೆ. ಜಾತ್ರೆ ಮುಗಿಸಿ ಮರಳಿ ಹೋಗುವ ಸಂದರ್ಭದಲ್ಲಿ ಅದೇ ಬುಟ್ಟಿಯಲ್ಲಿ ಸೇರಿರುವ ಎಲ್ಲ ಬಗೆಯ ಕಾಳನ್ನೂ ಮಿಶ್ರಣ ಮಾಡಿ, ದೇವರ ಪ್ರಸಾದವೆಂದು ತಂತಮ್ಮ ಉಡಿಯಲ್ಲಿ ಇಷ್ಟಿಷ್ಟು ಸುರಿದುಕೊಂಡು ಮರಳಿ ಕೊಂಡೊಯ್ಯುತ್ತಾರೆ. ತಮ್ಮ ಹೊಲದಲ್ಲಿ ಬಿತ್ತನೆ ಮಾಡುತ್ತಾರೆ. ದೂರದ ಊರುಗಳಿಂದ ಬಂದ ಜನರು ಹೀಗೆ ಪರಸ್ಪರ ತಳಿ ವಿನಿಮಯ ಮಾಡಿಕೊಂಡಾಗ ತಳಿ ವೈವಿಧ್ಯ ಹೆಚ್ಚುತ್ತದೆ. ಒಂದೇ ತಳಿಯ ಬೆಳೆಗಳು ಹೊಲದ ತುಂಬಾ ಇದ್ದರೆ ರೋಗರುಜಿನಗಳ, ಶಿಲೀಂಧ್ರಗಳ, ಕೀಟಗಳ ದಾಳಿಯ ಸಂಭವ ಹೆಚ್ಚಿಗೆ ಇರುತ್ತದೆ ಎಂಬುದನ್ನು ಆಧುನಿಕ ವಿಜ್ಞಾನ ಕೂಡ ಹೇಳುತ್ತದೆ. ಅಂಥ ಅಪಾಯವನ್ನು ಎದುರಿಸಲು ಬೇಕಾದ ತಂತ್ರವೊಂದು ಜಾತ್ರೆಯ ಸಂಪ್ರದಾಯದಲ್ಲೇ ಸೇರಿಹೋಗಿ, ಅದು ವಿಜ್ಞಾನ ಅಲ್ಲವೇನೊ ಎಂಬಂತೆ ಅವಗಣನೆಗೆ ತುತ್ತಾಗುವ ಸಂಭವ ಇರುತ್ತದೆ. ಹಿಂದಿನ ಕಾಲಕ್ಕೆ ಸೇರಿಹೋಗಿರುವ ಅಂಥ ಸಂಪ್ರದಾಯಗಳನ್ನು ಪೃಥಕ್ಕರಿಸಿ ನೋಡಿ, ಪರಂಪರೆಯಲ್ಲಿ ಅವಿತಿರುವ ವಿಜ್ಞಾನವನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ರೂಪಿಸಬೇಕಾದ ಅಗತ್ಯವಿದೆ.

ಹಾಗೆಂದು ಕೇವಲ ಪರಂಪರೆಯಲ್ಲಿ, ರೂಢಿಗತವಾಗಿ ಬಂದ ಆಚರಣೆಗಳನ್ನು ಮಾತ್ರ ಹೆಕ್ಕಿ ದಾಖಲಿಸಿದರೆ ಸಾಲದು. ಸಮಕಾಲೀನ 'ದೇಸಿ ವಿಜ್ಞಾನ'ವನ್ನೂ ಕನ್ನಡ ವಿಶ್ವವಿದ್ಯಾಲಯ ಪರಿಗಣಿಸಬೇಕಿದೆ. ಆಧುನಿಕ 'ವಿಜ್ಞಾನ' ಎಂದರೆ, ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆದು ಪಿಎಚ್.ಡಿ. ಮಾಡಿರುವವರಷ್ಟೇ ನಡೆಸುವ ಶಿಸ್ತಿನ ಸಂಶೋಧನೆ ಎಂಬ ಅಭಿಪ್ರಾಯ ನಮ್ಮಲ್ಲಿ ತಳವೂರಿದೆ. ಅಂಥ ಮಿಥ್ಯಾಭಿಪ್ರಾಯಗಳನ್ನು ಸುಳ್ಳು ಮಾಡಬಲ್ಲ ಜನಸಾಮಾನ್ಯರು ಸಂಶೋಧನೆಗಳತ್ತ ಕಣ್ಣು ಹಾಯಿಸಬೇಕಾದ ಕೆಲಸವನ್ನೂ ಕನ್ನಡ ವಿಶ್ವವಿದ್ಯಾಲಯ ಕೈಗೊಳ್ಳಬೇಕಿದೆ.

ನಿಂಬೆಗುಂದಿಯ ಹತ್ತಿ, ಗನೀಖಾನರ ತಳಿಖಜಾನೆ

ಈಗಿನ ಕಾಲದ 'ದೇಸಿ ವಿಜ್ಞಾನ' ಯಾವುದು? ಅದಕ್ಕೆ ಸಾಕಷ್ಟು ಉದಾಹರಣೆಗಳು ಗ್ರಾಮೀಣ ಜಗತ್ತಿನಲ್ಲಿ ಸಿಗುತ್ತವೆ. ಕೂಲಿಗಳ ಅಭಾವದಿಂದ ತತ್ತರಿಸಿದ ರೈತರು ನಾನಾ ಬಗೆಯ ಹೊಸ ಹೊಸ ತಂತ್ರಜ್ಞಾನವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಬೆಳೆ ರಕ್ಷಣೆ, ದೇಸಿ ತಳಿ ಸಂರಕ್ಷಣೆಗೆ ಗ್ರಾಮೀಣ ಮಟ್ಟದಲ್ಲೂ ಆದ್ಯತೆ ಸಿಗುತ್ತದೆ. ರೈತರೇ ಹೊಸ ಹೊಸ ಸಂಕರ ತಳಿಗಳನ್ನು ಸೃಷ್ಟಿಸತೊಡಗಿದ್ದಾರೆ. 'ಮೈಸೂರು ಮಲ್ಲಿಗೆ' ಹೆಸರಿನ ಭತ್ತದ ತಳಿಯನ್ನು ರೂಪಿಸಿದ ಚನ್ನಪಟ್ಟಣದ ರೈತ ಲಿಂಗಲಾದಯ್ಯ, 'ಎನ್ಎಮ್ಎಸ್೨' ಹೆಸರಿನ ಮತ್ತೊಂದು ಹೊಸ ತಳಿಯನ್ನು ಬಿಡುಗಡೆ ಮಾಡಿದ ನರಸೀಪುರದ ಶಂಕರ್‌ಗುರು ಇವರೆಲ್ಲ ಕೃಷಿವಿಜ್ಞಾನಿಗಳಿಂದಲೇ ಸೈ ಎನ್ನಿಸಿಕೊಂಡಿದ್ದಾರೆ. ತಳಿಸಂರಕ್ಷಣೆಯ ಕೆಲಸದಲ್ಲಂತೂ ಪೈಪೋಟಿಯಲ್ಲಿ ಹಿರೇಕೆರೂರಿನ ನಾಗಪ್ಪ ನಿಂಬೆಗುಂದಿ, ಕಿರುಗಾವಲಿನ ಸೈಯದ್ ಗನೀಖಾನ್ ಮುಂತಾದವರು ಹೆಚ್ಚು ಹೆಚ್ಚು ತಳಿಗಳ ರಕ್ಷಣೆಯ ಹೊಣೆ ಹೊರುತ್ತಿದ್ದಾರೆ. ನಿಂಬೆಗುಂದಿ ಬಿಟಿ ಹತ್ತಿಯ ಹಾವಳಿಯನ್ನು ಎದುರಿಸಲೆಂದು ತಮ್ಮ ಹೊಲದಲ್ಲಿ ದೇಸಿ ಹತ್ತಿಯ ೪೦ ತಳಿಗಳನ್ನು, ಕಿರುಧಾನ್ಯಗಳ ೬೦ಕ್ಕೂ ಹೆಚ್ಚು ತಳಿಗಳನ್ನು, ಸೊಪ್ಪು ತರಕಾರಿಯ ೨೦–೩೦ ಜಾತಿಯನ್ನು ತಮ್ಮಲ್ಲಿ ಸಂರಕ್ಷಿಸಿದ್ದಾರೆ. ಯಾವ ಕೃಷಿ ವಿಶ್ವವಿದ್ಯಾಲಯಕ್ಕೂ ಕಮ್ಮಿ ಇಲ್ಲದಂತೆ ಗನೀಖಾನ್ ತಮ್ಮ ಜಮೀನಿನಲ್ಲಿ ಟಿಪ್ಪೂ ಕಾಲದ ೧೨೦ ಮಾವಿನ ತಳಿಗಳಲ್ಲದೆ ೭೨೦ಕ್ಕೂ ಹೆಚ್ಚು ಬಗೆಯ ಭತ್ತದ ತಳಿಗಳ ಸಂರಕ್ಷಕರಾಗಿದ್ದಾರೆ. ವಿಜ್ಞಾನಿಗಳಲ್ಲಿ ಕಾಣಬೇಕಾದ ಎಲ್ಲ ಶಿಸ್ತು, ದಾಖಲೀಕರಣ, ತಳಿಶುದ್ಧಿ ಪರೀಕ್ಷೆಗಳನ್ನು ಇವರು ಮಾಡುತ್ತಾರೆ. ಇವರ ಯತ್ನಗಳಿಗೆ ಕೈಜೋಡಿಸಲೆಂದು ದೇಶದ ವಿವಿಧ ರಾಜ್ಯಗಳ ಗ್ರಾಮೀಣ ತಳಿರಕ್ಷಕರು ತಮ್ಮಲ್ಲಿರುವ ವಿವಿಧ ಬಗೆಯ ತಳಿಗಳನ್ನು ಇವರಿಗೆ ಉಚಿತವಾಗಿ ತಂದುಕೊಡುತ್ತಿದ್ದಾರೆ. ಒಂದರ್ಥದಲ್ಲಿ ಗನೀಖಾನ್‌ಗಳು, ನಿಂಬೆಗುಂದಿಗಳು ತಳಿಖಜಾನೆಯನ್ನು ರೂಪಿಸುತ್ತಿದ್ದಾರೆ. ವರ್ಷವರ್ಷವೂ ಇವರ ತಳಿಖಜಾನೆ ದೊಡ್ಡದಾಗುತ್ತಿದೆ. ಬ್ರಿಟನ್ನಿನ ಕೀವ್ ಸಸ್ಯೋದ್ಯಾನದಲ್ಲಿ ಅಥವಾ ಫಿಲಿಪ್ಪೀನ್ಸಿನ ಭತ್ತದ ತಳಿಸಂಗ್ರಹಾಲಯದಲ್ಲಿ ಆಧುನಿಕ ಸಸ್ಯವಿಜ್ಞಾನಿಗಳು ಮಾಡುತ್ತಿರುವ ಕೆಲಸವನ್ನು ಸದ್ದಿಲ್ಲದೆ ನಮ್ಮ ಗ್ರಾಮೀಣ ಉತ್ಸಾಹಿಗಳು ಕೈಗೊಂಡಿದ್ದಾರೆ. ಅವರ ಯತ್ನಗಳನ್ನು ದಾಖಲಿಸಬೇಕಾಗಿದೆ. ಇದಲ್ಲದೆ, ಆಧುನಿಕ ಕೀಟನಾಶಕ, ಕ್ರಿಮಿನಾಶಕ ಕೆಮಿಕಲ್‌ಗಳ ಅಪಾಯದಿಂದ ಬೇಸತ್ತು ರಾಜ್ಯಾದ್ಯಂತ ನೂರಾರು ರೈತರು ಬದಲೀ ಸುರಕ್ಷಿತ ರೋಗನಿಯಂತ್ರಕ ಸಾವಯವ ದ್ರವ್ಯಗಳನ್ನು ರೂಪಿಸುತ್ತಿದ್ದಾರೆ. ಕೃಷಿ ವಿಶ್ವವಿದ್ಯಾಲಯ ಇರುವಂತೆ ವಿಸ್ತರಣಾ ವ್ಯವಸ್ಥೆ ಇಲ್ಲದಿರುವುದರಿಂದ ಇಂಥ ಖಾಸಗಿ ವಿಜ್ಞಾನಿಗಳ ಯಶಸ್ವೀ ವಿಧಾನಗಳು ನಿರೀಕ್ಷಿತ ಪ್ರಮಾಣದಲ್ಲಿ ಪ್ರಚಾರಕ್ಕೆ ಬಾರದೆ ಮೂಲೆಗುಂಪಾಗುವ ಸಂಭವ ಇದೆ. ಕನ್ನಡ ವಿಶ್ವವಿದ್ಯಾಲಯ ಇಂಥವುಗಳನ್ನು ದಾಖಲಿಸಿ ಬೆಳಕಿಗೆ ತಂದರೆ ಕನ್ನಡ ರೈತ ಸಮುದಾಯಕ್ಕೆ ಹಾಗೂ ಆ ಮೂಲಕ ಇಡೀ ಸಮಾಜಕ್ಕೆ ಅದೊಂದು ಮಹತ್ವದ ಕೊಡುಗೆಯಾಗುತ್ತದೆ.

ವಿಜ್ಞಾನ, ಅದು ಆಧುನಿಕದ್ದಾಗಿರಲಿ, ದೇಸಿ ಆಗಿರಲಿ–ಅದರ ಬಹುಮುಖ್ಯ ಲಕ್ಷಣ ಏನಿರಬೇಕೆಂದರೆ ತನ್ನನ್ನೆ ಕಾಲಕಾಲಕ್ಕೆ ಅದು ಪರೀಕ್ಷೆಗೆ ಒಡ್ಡಿಕೊಳ್ಳುತ್ತಿರಬೇಕು. ಹಳೆಯ ನಂಬಿಕೆಗಳು, ಹಳೆಯ ಸಂಪ್ರದಾಯಗಳು ಆಗಿನ ಕಾಲಕ್ಕೆ ಅದೆಷ್ಟೇ ವೈಜ್ಞಾನಿಕವೆನಿಸಿದರೂ ಈಗಿನ ಪರಿಸ್ಥಿತಿಯಲ್ಲಿ ಅವು ವೈಜ್ಞಾನಿಕವೆನಿಸಿದರೆ ಅದನ್ನೂ ಎತ್ತಿ ತೋರಿಸುವ ಪರಿಜ್ಞಾನವನ್ನು ನಾವು ಬೆಳೆಸಿಕೊಳ್ಳಬೇಕಾಗುತ್ತದೆ. ಮಲೆನಾಡಿನ ಅನೇಕ ಹಳ್ಳಿಗಳ ಹಳ್ಳಕೊಳ್ಳಗಳಲ್ಲಿ ಮೀನು ಹಿಡಿಯಲೆಂದು ಕಾಸರಕ(ನಕ್ಸ್‌ವೋಮಿಕಾ), ಕಾರೆಕಾಯಿಗಳನ್ನು ಜಜ್ಜಿ ನೀರಿಗೆ ಹಾಕುತ್ತಾರೆ. ಕೊಳ್ಳದ ನೂರಿನ್ನೂರು ಮೀಟರ್ ದೂರದವರೆಗಿನ ಎಲ್ಲ ಜಲಜೀವಿಗಳೂ ಸತ್ತು ಇಲ್ಲವೆ ಪ್ರಜ್ಞೆ ತಪ್ಪಿ ನೀರಿನ ಮೇಲೆ ತೇಲುತ್ತವೆ. ಮೀನುಗಳನ್ನು ಮಾತ್ರ ಎತ್ತಿ ಅಡುಗೆಗೆ ಒಯ್ಯುತ್ತಾರೆ; ಇತರ ಅನೇಕ ಜಲಜೀವಿಗಳು, ದ್ವಿಚರಗಳು ಉಸಿರುಗಟ್ಟಿ ನಿರರ್ಥಕವಾಗಿ ಸಾವಪ್ಪುತ್ತವೆ. ಹಿಂದಿನ ಕಾಲದಲ್ಲಿ ವರ್ಷವಿಡೀ ತೊರೆಯಲ್ಲಿ ನೀರು ಹರಿಯುತ್ತಿದ್ದಾಗ ಇಂಥ ಘಾತುಕ ಕೆಲಸಗಳನ್ನು ನಿಸರ್ಗ ಹೇಗೊ ಸಹಿಸಿಕೊಳ್ಳುತ್ತಿತ್ತು. ವಿಷದ ನೀರು ಹೊರಟು ಹೋದನಂತರದ ಹೊಸ ನೀರಿನಲ್ಲಿ ಜೀವಿಗಳ ಮರುಭರ್ತಿ ಆಗುತ್ತಿತ್ತು. ಯಾವ ಸಸ್ಯದಲ್ಲಿ ಎಷ್ಟು ಉಗ್ರ ವಿಷವಿದೆ ಎಂಬ ಅಂದಿನ ಗ್ರಾಮೀಣ ಸಸ್ಯಜ್ಞಾನಕ್ಕೆ ಗೌರವ ಕೋಡೋಣ. ಆದರೆ ಈಗಿನ ದಿನಗಳಲ್ಲಿ ಹೀಗೆ ನದಿಗೆ ವಿಷವಿಟ್ಟು ಮೀನು ಹಿಡಿಯುವುದು ಅವೈಜ್ಞಾನಿಕ ಕ್ರಮವೆಂದೇ ವಿಶ್ಲೇಷಿಸಬೇಕಾಗುತ್ತದೆ. ಅದೇ ರೀತಿ, ಕೆಲವು ಬಗೆಯ ಹುಲ್ಲಿನ ಬೀಜಗಳು ಬೆಂಕಿಯ ಝಳಕ್ಕೆ ಸಿಕ್ಕು ಹೊರಗಿನ ಸಿಪ್ಪೆ ಭಾಗಶಃ ಸುಟ್ಟುಹೋದರೆ ಮಾತ್ರ ಮೊಳಕೆ ಒಡೆಯುತ್ತವೆ. ಹಾಗೆ ಸುಟ್ಟರೆ ಹುಲ್ಲು ಚೆನ್ನಾಗಿ ಬರುತ್ತದೆಂಬ ಜ್ಞಾನವನ್ನು ಮೆಚ್ಚಬೇಕಾದದ್ದೇ. ಆದರೆ ಹುಲ್ಲು ಚೆನ್ನಾಗಿ ಬರಲೆಂದು ಕಾಡಿನಂಚಿನ ಗೋಮಾಳಕ್ಕೆ ಬೆಂಕಿ ಕೊಡುವ ಪರಂಪರೆ ಅನೇಕ ಕಡೆ ಚಾಲ್ತಿಯಲ್ಲಿದೆ. ಅದೆಷ್ಟೊ ಬಾರಿ ಪಕ್ಕದ ಅರಣ್ಯಗಳಿಗೆ ಬೆಂಕಿ ಆವರಿಸಿ ಇಡೀ ಕಾಡನ್ನೇ ಸುಟ್ಟು ಹಾಕಿದ್ದೂ ಇದೆ. ಗೋಮಾಳಕ್ಕೆ ಬೆಂಕಿ ಕೊಡುವ ಪರಂಪರಾಗತ ಕ್ರಮಗಳನ್ನು ಈಗಿನ ಕಾಲದಲ್ಲಿ ಅವೈಜ್ಞಾನಿಕ ಎಂದೇ ಹೇಳಬೇಕಾಗುತ್ತದೆ.

ಹಿಂದಿನವರ ಅರಿವಿನ ಇತಿಮಿತಿಗಳು

ನಮ್ಮ ಅನೇಕ ಬುಡಕಟ್ಟುಗಳ ಜನರು ಸುತ್ತಲಿನ ಅಡವಿಯನ್ನು ಕೊಚ್ಚಿ ಸುಟ್ಟು, ಅಲ್ಲಿ ರಾಗಿ, ಭತ್ತ, ತರಕಾರಿಗಳನ್ನು ಬೆಳಸುತ್ತಾರೆ. ಪ್ರತಿ ಮೂರು ನಾಲ್ಕು ವರ್ಷಗಳಿಗೊಮ್ಮೆ ಹಾಗೆ ಪರಿವರ್ತಿಸಿದ ಜಮೀನನ್ನು ಬೀಳುಬಿಟ್ಟು ಬೇರೊಂದು ಅರಣ್ಯಕ್ಕೆ ಹೋಗಿ ಅದನ್ನು ಕೊಚ್ಚಿ ಸುಟ್ಟು ಕಮತ ನಡೆಸುತ್ತಾರೆ. ಹಿಂದಿನ ಕಾಲದಲ್ಲಿ ಅದು ಅವರ ಉಳಿವಿನ ಮೂಲಾಧಾರವಾಗಿತ್ತು. ಹಿಂದೆ ಕೊಚ್ಚಿ ಸುಟ್ಟ ಅರಣ್ಯ ಮತ್ತೆ ಬೆಳೆಯಲೆಂಬ ಉದಾತ್ತ ಉದ್ದೇಶದ ಈ ಕೃತ್ಯ ವೈಜ್ಞಾನಿಕವೆನಿಸಿತ್ತು. ಅದರೆ ಅರಣ್ಯಗಳು ನಾನಾ ಕಾರಣಗಳಿಂದ ಕಡಿಮೆಯಾಗುತ್ತಿರುವ ಈ ಯುಗದಲ್ಲಿ ಅರಣ್ಯವಾಸಿಗಳೇ ಕಾಡನ್ನು ಕೊಚ್ಚಿ ಸುಡುವುದು ಅವೈಜ್ಞಾನಿಕ ಅಷ್ಟೇ ಅಲ್ಲ, ಅಪರಾಧವೆನಿಸುತ್ತದೆ. ಅನೇಕ ಬುಡಕಟ್ಟು ಜನಾಂಗದವರು ಅಂಥ ಸಂಪ್ರದಾಯವನ್ನು ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದಾರೆ. ಹಾಗೆಯೇ ರೈತ ಸಮುದಾಯದವರು ಕಟ್ಟಿರುವುದು, ತೆಂಗಿನ ಗರಿಗಳಂಥ ಕೃಷಿತ್ಯಾಜ್ಯಗಳನ್ನು ಸುಡುವ ಪದ್ಧತಿ ಕೂಡ ಇಂದಿನ ಯುಗದಲ್ಲಿ ತೀರ ಅವೈಜ್ಞಾನಿಕವೆನಿಸುತ್ತದೆ. ಸಸ್ಯಗಳಲ್ಲಿನ ಇಂಗಾಲವನ್ನು ಸುಟ್ಟರೆ ವಾತಾವರಣಕ್ಕೆ ಸೇರಿಹೋಗಿ ಭೂಮಿಯ ಒಟ್ಟಾರೆ ತಾಪವನ್ನು ಹೆಚ್ಚಿಸುತ್ತದೆ. ಅದರ ಬದಲು ಕೃಷಿತ್ಯಾಜ್ಯವನ್ನು ಇಡಿಯಾಗಿ ಹುಳುವ 'ಕಾರ್ಬನ್ ಸಿಕ್ವೆಸ್ಟ್ರೇಶನ್' ವಿಧಾನವನ್ನು ಯಾವುದೇ ರೈತರು ಅಳವಡಿಸಿದ್ದರೆ ಅಂಥ ಮಾದರಿಗಳನ್ನು ಎತ್ತಿ ತೋರಿಸಬೇಕಾದ ಅಗತ್ಯವಿದೆ. ಅಮೆಝಾನ್ ಕಾಡಿನ ಕೆಲವು ಬುಡಕಟ್ಟಿನ ಜನರು ಅನಾದಿಕಾಲದಿಂದ ಈ ವಿಧಾನವನ್ನು ಅನುಸರಿಸುತ್ತಿದ್ದುದು ಈಗಿನ ವಿಜ್ಞಾನಿಗಳ ಪ್ರಶಂಸೆಗೆ ಪಾತ್ರವಾಗಿದೆ.

'ದೇಸಿ ವಿಜ್ಞಾನ' ವಿಭಾಗಕ್ಕೆ ಎದುರಾಗುವ ಎಲ್ಲಕ್ಕಿಂತ ದೊಡ್ಡ ಸವಾಲೆಂದರೆ ವಿಜ್ಞಾನ ಯಾವುದು, ಮೂಢನಂಬಿಕೆ ಯಾವುದು ಎಂಬುದನ್ನು ವಿಂಗಡಿಸುವುದು. ಅಶ್ವತ್ಥ ಮರವನ್ನು ಸುತ್ತಿದರೆ ಮಕ್ಕಳಾಗುತ್ತವೆ ಎಂಬುದನ್ನು ಹೇಗೆ ವಿಶ್ಲೇಷಿಸೋಣ? ಮೇಲ್ನೋಟಕ್ಕೆ ಇದೊಂದು ಮೂಢನಂಬಿಕೆ ಅಥವಾ ರೂಢನಂಬಿಕೆಯಂತೆ ಕಾಣುತ್ತದೆ. ಆದರೆ ಅದರ ಹಿಂದೆ ಅಪ್ಪಟ ವೈಜ್ಞಾನಿಕ ತಿಳುವಳಿಕೆ ಇದೆ. ಆಗಿನ ಕಾಲದಲ್ಲಿ ದಿನಕ್ಕೆ ಮೂರು ನಾಲ್ಕು ಗಂಟೆಗಳ ಕಾಲ ಅಡುಗೆ ಮನೆಯಲ್ಲಿ ಸೌದೆ ಒಲೆಯ ಹೊಗೆಮಸಿಯ ಮಧ್ಯೆ ಏಗಬೇಕಾಗಿದ್ದ ಮಹಿಳೆಗೆ ಆಮ್ಲಜನಕ ಸಾಕಷ್ಟು ಸಿಗುತ್ತಿರಲಿಲ್ಲ(ಈಗ ಸುಧಾರಿತ ಒಲೆಗಳು, ಗ್ಯಾಸ್ ಸಿಲಿಂಡರ್‌ಗಳು ಬಂದಿವೆ). ಅಡುಗೆ ಮನೆಯಲ್ಲಿ ಹೊಗೆಯನ್ನೇ ಉಸಿರಾಡಬೇಕಾದ ಅವಳ ಶ್ವಾಸಕೋಶಕ್ಕೆ ಇಂಗಾಲದ ಡೈಆಕ್ಸೈಡ್ ಸೇರುತ್ತಿತ್ತು. ರಕ್ತಕ್ಕೆ ಆಮ್ಲಜನಕ ಸಾಕಷ್ಟು ಸಿಗದೆ, ಅವಳ ಹಿಮೊಗ್ಲೋಬಿನ್ ಹಂಚಿಕಡ್ಡಿಯಂತಿರುವುದನ್ನು ನಾವು ಕಾಣುತ್ತೇವೆ. ಪ್ರತಿತಿಂಗಳೂ ಋತುಸ್ರಾವದ ರೂಪದಲ್ಲಿ ರಕ್ತಹಾನಿಯಾಗುತ್ತದೆ. ಜೊತೆಗೆ ದೇಹದಲ್ಲಿರುವ ರಕ್ತವೂ ದುರ್ಬಲವಾಗಿ ಭಾರತದ ಬಹಳಷ್ಟು ಹೆಣ್ಣುಮಕ್ಕಳು ಅನೀಮಿಯಾದಿಂದ ಬಳಲುತ್ತಾರೆ. ಅಶ್ವತ್ಥಮರ ಇತರ ವೃಕ್ಷಗಳಿಗಿಂತ ಹೆಚ್ಚಿನ ಪ್ರಮಾಣದ ಆಮ್ಲಜನಕವನ್ನು ಕೊಡುತ್ತದೆ. ದಿನದ ಕೆಲವು ಸಮಯವನ್ನಾದರೂ ಮಹಿಳೆಯರು ಅದರ ಬಳಿ ಸುಳಿದಾಡಿದರೆ ಆಕೆಯ ರಕ್ತ

ಶುದ್ಧವಾಗುತ್ತದೆ, ದೇಹಕ್ಕೆ ಗಟ್ಟಿತನ ಬರುತ್ತದೆ ಎಂಬ ವೈಜ್ಞಾನಿಕ ಅತ್ಯ ಅಲ್ಲಿದೆ. ಅದನ್ನೊಂದು ರೂಪದಲ್ಲಿ ಹೆಂಗಸರು ಅಮ್ಮಜನಕ ಸೇವನೆ ಮಾಡುವಂತೆ ಮಾಡಿರುವುದನ್ನು ನಾವು ಮೆಚ್ಚಿಕೊಳ್ಳಬೇಕಾದ ಅಂಶವೂ ಹೌದು.

ರೂಢನಂಬಿಕೆಗಳು, ಮೂಢನಂಬಿಕೆಗಳು

ಆಧುನಿಕ ವೈಜ್ಞಾನಿಕ ವಿಶ್ಲೇಷಣೆಗೆ ನಿಲುಕಬಲ್ಲ ಇಂಥ ರೂಢನಂಬಿಕೆಗಳನ್ನು ಒತ್ತಟ್ಟಿಗಿಡೋಣ. ಮೂಢನಂಬಿಕೆಯಂತೆ ತೋರುವ ಬಹಳಷ್ಟು ಗ್ರಾಮೀಣ ಸಂಪ್ರದಾಯಗಳು ನಮ್ಮ ವಿಜ್ಞಾನಿಗಳ ಗ್ರಹಿಕೆಗೆ ನಿಲುಕುವುದಿಲ್ಲ ಅಥವಾ ಸತ್ಯಾಸತ್ಯವನ್ನು ವಿಶ್ಲೇಷಿಸುವ ಸಾಮರ್ಥ್ಯವಾಗಲಿ, ಆಸಕ್ತಿಯಾಗಲಿ ಅವರಿಗೆ ಇರುವುದಿಲ್ಲ. ಶುಕ್ಲಪಕ್ಷದಲ್ಲಿ ಬೀಜ ಊರಿದರೆ ಬೆಳೆ ಚೆನ್ನಾಗಿ ಬರುತ್ತದೆ; ಅಮಾವಾಸ್ಯೆಯ ಇಂಥ ಹೊತ್ತಿನಲ್ಲಿ ಇಂಥ ಪ್ರಾಣಿಯ ಕೊಂಬನ್ನು ನೆಲದಲ್ಲಿ ಹೂತಿಟ್ಟರೆ ಇಡೀ ಹೊಲದ ಇಳುವರಿ ಏರುತ್ತದೆ. ಈ ಬಗೆಯ ನಂಬಿಕೆ ಮತ್ತು ಆಚರಣೆಗಳ ಹಿಂದಿರುವ 'ವೈಜ್ಞಾನಿಕ' ತಥ್ಯಗಳನ್ನು ಅರಿಯಬಲ್ಲ ಸಾಧನವಾಗಲೀ ಸಾಮರ್ಥ್ಯವಾಗಲೀ ಆಧುನಿಕ ವಿಜ್ಞಾನಕ್ಕಿಲ್ಲ. ಏಕೆಂದರೆ ಆಧುನಿಕ ವಿಜ್ಞಾನಕ್ಕೆ ಎಂದೂ ಸತ್ಯ ಇಡಿಯಾಗಿ ಗೋಚರಿಸಿದ್ದೇ ಇಲ್ಲ. ಬೀಜ ಹೇಗೆ ಮೊಳಕೆ ಒಡೆಯುತ್ತದೆ ಎಂಬುದನ್ನು ಬೀಜಕೋಶ, ಅಂಡಾಶಯ, ತೇವಾಂಶ, ಉಷ್ಣಾಂಶ, ಬೀಜದಳಗಳ ಬಿಡಿಬಿಡಿ ಪ್ರಕ್ರಿಯೆಗಳ ಮೂಲಕ ಅದು ವಿವರಿಸುತ್ತದೆ ವಿನಾ ಬೀಜ ಊರಿದವನ ಕೈಗುಣವನ್ನಾಗಲೀ, ಕಾಸ್ಮಿಕ್ ಕಿರಣಗಳ ಪ್ರಭಾವವನ್ನಾಗಲೀ ಅಲ್ಲ. ಅಂಥ ಇದಮಿತ್ಥಂ ಎನ್ನಲಾಗದ ಅವಧಿಯಲ್ಲೇ ನಮ್ಮ ಗ್ರಾಮೀಣ ಸಂಪತ್ತನ್ನು, ಪರಂಪರಾಗತ ಜ್ಞಾನಭಂಡಾರವನ್ನು ತಮ್ಮದಾಗಿಸಿಕೊಳ್ಳ ಬಯಸುವವರಿಗೆ ಅನುಕೂಲವಾಗುವಂತೆ ಬೌದ್ಧಿಕ ಆಸ್ತಿಗೆ ಸಂಬಂಧಿಸಿದ ಪೇಟೆಂಟ್ ಕಾನೂನುಗಳನ್ನು ಬರೆಯಲಾಗುತ್ತಿದೆ. ಖಾಸಗಿ ಕಂಪನಿಗಳು ತಮ್ಮ ಲಾಭಕ್ಕಾಗಿ ನಮ್ಮದೇ ವಿಜ್ಞಾನಿಗಳ ನೆರವಿನಿಂದ ಸಂಶೋಧನೆಯ ಹೆಸರಿನಲ್ಲಿ ತಳಿಗಣಿಗಾರಿಕೆ ನಡೆಸುತ್ತಿವೆ. ವಿಜ್ಞಾನದ ಫಲವನ್ನು ಲೋಕಕಲ್ಯಾಣಕ್ಕೆ ಅರ್ಪಿಸುವ ಕಾಲ ಎಂದೋ ಕಣ್ಮರೆಯಾಗಿದೆ. ಇಂದು ವಿಜ್ಞಾನವೆಂದರೆ ಅಧಿಕಾರಶಾಹಿಗಳ, ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಹಾಗೂ ಸೇವೆಗಾಗಿಯೇ ಮುಡಿಪಾಗಿಡುವ ಜ್ಞಾನಶಾಖೆಯಾಗಿ ಮಾರ್ಪಟ್ಟಿದೆ. ಶ್ರೀಸಾಮಾನ್ಯನ ಬದುಕಿನ ಜಂಜಡವನ್ನು ಕಡಿಮೆ ಮಾಡುವ ಬದಲು ಅದು ಈಗ ಶೋಷಣೆಯ ಹೊಸ ಮಾರ್ಗವಾಗಿದೆ.

ಇಂಥ ವಿಕ್ಷಿಪ್ತ ಘಳಿಗೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಹೊಸ ಅಧ್ಯಯನ ವಿಭಾಗವನ್ನು ಆರಂಭಿಸುತ್ತಿರುವುದು ನಮ್ಮ ವಿಜ್ಞಾನ ಪರಂಪರೆಯ ಶ್ಲಾಘನೀಯ ಘಟ್ಟವೆನ್ನಬೇಕು. ಶೋಷಿತರು, ಅರೆಸಾಕ್ಷರರು, ಅನಕ್ಷರಸ್ಥರು ತಮ್ಮೊಂದಿಗೆ ಉಳಿಸಿಕೊಂಡು ಬಂದ ಅರಿವಿನ ಗಂಟನ್ನು ತನ್ನ ಸಂದೂಕದಲ್ಲಿ ಕಾಪಿಡಲು, ಹೊಸ ಅರಿವಿನ ಬೆಳಕಿನಲ್ಲಿ ಹೊಳಪು ಕೊಡಲು ಅದು ಮುಂದಾಗಿದೆ. ಪುಸ್ತಕಗಳಲ್ಲಿ ಬರೆದಿರುವುದೇ ವಿಜ್ಞಾನ, ಶಾಲೆ–ಕಾಲೇಜುಗಳಲ್ಲಿ ಬೋಧಿಸುವುದೇ ವಿಜ್ಞಾನ, ಗಾಜಿನ ಪ್ರಯೋಗಶಾಲೆಗಳಲ್ಲಿನ ಕೆಲಸಗಳೇ ವಿಜ್ಞಾನ ಎಂಬ ಭ್ರಮೆಯನ್ನು ನಾವೆಲ್ಲರೂ ಪೋಷಿಸುತ್ತಿದ್ದೇವೆ. ಆ ಭ್ರಮೆಯನ್ನು ತೊಳೆಯುವ ಕೆಲಸ ನಡೆಯಬೇಕಿದೆ. ವಿದ್ಯೆಯನ್ನು ಸೃಷ್ಟಿಸುವ ವಿದ್ಯಾಲಯವೆನ್ನಿಸಿದ ಈ ಸಂಸ್ಥೆ ಅಸಾಂಪ್ರದಾಯಿಕ ವಿಜ್ಞಾನವನ್ನು ಪೋಷಿಸುವ, ದೇಸಿ ವಿಜ್ಞಾನವನ್ನು ಸೃಷ್ಟಿಸುವ ಸಂಸ್ಥೆಯಾಗಿ ಆಧುನಿಕ ವಿಜ್ಞಾನಕ್ಕೂ ಹೊಸ ಪಾಠ ಹೇಳಲೆಂದು ಆಶಿಸುತ್ತೇನೆ.

ಒಳಮನೆಯ ಕನ್ನಡಕ್ಕೆ ಹೊಸಗಾಳಿ ಬೀಸಲೆಂದು ಹಾರೈಸುತ್ತೇನೆ.

ಕೊನೆಯದಾಗಿ ಒಂದು ಮಾತು: ನಮ್ಮೆಲ್ಲಾ ವಿಶ್ವವಿದ್ಯಾಲಯಗಳು ತಾವು ಸೃಷ್ಟಿಸುವ, ಸಂಗ್ರಹಿಸುವ ಲೋಕಜ್ಞಾನವನ್ನು ವಿಶ್ವಕೋಶಗಳಾಗಿ ಮಾರ್ಪಡಿಸಿ, ಅವುಗಳ ಪ್ರಕಟಣೆಯ ಹಕ್ಕುಗಳನ್ನು ತಮ್ಮಲ್ಲೇ ಇಟ್ಟುಕೊಳ್ಳುತ್ತವೆ ವಿನಾಃ ಅರಿವಿನ ಲೋಕಕ್ಕೆ ಮುಕ್ತವಾಗಿ ಹರಿಬಿಡುವುದಿಲ್ಲ. ಅಂಥ ಪ್ರಕಟಣೆಗಳು ಕೆಲವರಿಗೆ ಮಾತ್ರ ಕೈಗೆಟುಕುವಂತೆ ಸುಭದ್ರ ಕಪಾಟುಗಳಲ್ಲಿ ಉಳಿಯುತ್ತವೆ ವಿನಾ, ಜನಬಳಕೆಗೆ ಮುಕ್ತವಾಗಿ ಸಿಗುತ್ತಿಲ್ಲ. ಇಂದಿನ ಡಿಜಿಟಲ್ ಯುಗದಲ್ಲಿ ಅಂಥ ಜ್ಞಾನವೆಲ್ಲ ಬಹುಮಾಧ್ಯಮಗಳ ಮೂಲಕ, ಮೊಬೈಲ್, ಐಪ್ಯಾಡ್ ಮುಂತಾದ ಸಾಧನಗಳ ಮೂಲಕ, ಅಂತರಜಾಲದ ಮೂಲಕ ಯಾರಿಗೆ ಬೇಕಾದವರಿಗೆ, ಯಾವಾಗ ಬೇಕೆಂದರಾವಾಗ ಉಚಿತವಾಗಿ ಸಿಗುವಂತಾಗಬೇಕು. ಸಾರ್ವಜನಿಕರ ಹಣದಿಂದ ಸಂಗ್ರಹಿಸಿದ ಜ್ಞಾನವೆಲ್ಲ ಸಾರ್ವಜನಿಕರಿಗೆ ಮುಕ್ತವಾಗಿ ಸಿಗಬೇಕು. ದೇಸಿ ವಿಜ್ಞಾನನಿಕಾಯ ಈ ನಿಟ್ಟಿನಲ್ಲೂ ಪ್ರಥಮ ಹೆಜ್ಜೆಯನ್ನಿಡುವಂತಾಗಬೇಕು. ದೇಶಕ್ಕೆ ಮಾದರಿಯಾಗಬೇಕು.

ಜೈ ಪೃಥ್ವಿ, ಜೈ ಕರ್ನಾಟಕ

ಶ್ರೀ ನಾಗೇಶ್ ಹೆಗಡೆ
(ಕರ್ನಾಟಕದ ಶ್ರೇಷ್ಠ ಬರಹಗಾರರು ಹಾಗೂ
ಪರಿಸರಪ್ರೇಮಿಗಳು ಇವರ ೨೨ನೇ ಘಟಿಕೋತ್ಸವ
ಭಾಷಣದ ಆಯ್ದ ಭಾಗ)

೩೦. ೨೦೧೨–೧೩ನೇ ಸಾಲಿನ ಯೋಜನೆ ಅನುದಾನದ ನಿಜವೆಚ್ಚಗಳು

೨೦೧೨–೧೩ನೇ ಆರ್ಥಿಕ ಪರಿಸ್ಥಿತಿಯ ಘೋಷ್ವಾರು

ಜಮಾ			ಖರ್ಚು		
ಕ್ರ.ಸಂ.	**ವಿವರ**	**ಮೊತ್ತ**	**ಕ್ರ.ಸಂ.**	**ವಿವರ**	**ಮೊತ್ತ**
1.	ಪ್ರಾರಂಭದ ಶಿಲ್ಕು	144875385.00	1.	ಪಾವತಿ	240312137.24
2.	ಜಮಾ	289176140.00	2.	ಅಂತಿಮ ಶಿಲ್ಕು	193739387.76
	ಒಟ್ಟು ಮೊತ್ತ	**434051525.00**		**ಒಟ್ಟು ಮೊತ್ತ**	**434051525.00**



ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೩–೧೪ನೇ ಸಾಲಿನ ಜಮಾದ ಘೋಷ್ವಾರು

ವಿವರಗಳು	ಜಮದ ಮೊತ್ತ
I. ವೇತನ ಖಾತೆ	121278146.39
II. ನಿವೃತ್ತಿ ವೇತನ ಖಾತೆ	8656436.93
III. ಪ್ರಸಾರಾಂಗ	2520397.16
IV ದೂರಶಿಕ್ಷಣ	15635750.19
V. ಶಿಷ್ಯವೇತನ (ಫೆಲೋಷಿಪ್)	3873725.00
VI. ದತ್ತಿನಿಧಿ	233626.37
VII. ಪೀಠಗಳು	1585204.96
VIII.ಗಿರಿಜನ ಉಪ ಯೋಜನೆ	4997256.00
IX. ಚಿತ್ರಕಲೆ ವಿದ್ಯಾಲಯಗಳ ನಿರ್ವಹಣಾ ಕೇಂದ್ರ	18435855.00
X. ವಿಶೇಷ ಘಟಕ ಯೋಜನೆ	11422304.00
XI. ಯುಜಿಸಿ	39398771.64
XII. ವಿದ್ಯಾರ್ಥಿಗಳಿಂದ ಹಾಗೂ ಇತರೆ ಶುಲ್ಕದಿಂದ ಬಂದ ಆದಾಯ	57632742.19
XIII ಇತರೆ	3505924.17
ಒಟ್ಟು ಮೊತ್ತ	**289176140.00**

2013–14ನೇ ಸಾಲಿನಲ್ಲಿ ಆದಾಯಗಳ ವಿವರಗಳು

	ವಿವರಗಳು	ಒಟ್ಟು ಮೊತ್ತ
ಪ್ರಾರಂಭದ ಶಿಲ್ಕು		**144875385.00**
I. ವೇತನ ಖಾತೆ		
1	ಸರ್ಕಾರದಿಂದ ಸ್ವೀಕೃತಿಯಾದ ಬ್ಲಾಕ್ ಅನುದಾನ	120000000.00
2	ಉಳಿತಾಯ ಖಾತೆ ಬಡ್ಡಿ	315344.39
3	ಆರ್‌ಟಿಡಿಎಸ್	10791.00
4	ತಾರಕೇಶ್ವರ ಇವರಿಗೆ ಹೆಚ್ಚುವರಿ ಪಾವತಿಸಿದ ಮನೆಬಾಡಿಗೆ ಭತ್ಯೆ ಮೊತ್ತ	46841.00
5	ಡಾ.ಟಿ.ಆರ್. ಚಂದ್ರಶೇಖರ ಅವರ ಲೆಕ್ಕ ಪರಿಶೀಲನಾ ವರದಿ ಕಂಡಿಕೆ (39) ಅನುಬಂಧ–ರೂ.40752/– ವೇತನ ಬಡ್ತಿ ಕಡಿತ ರೂ.51584/–ಹೆಚ್.ಆರ್.ಎ.ಬಾಕಿ ಮೊತ್ತ 75316/–	191048.00
6	ಶ್ರೀ ಜೈನುಲ್ಲಾ ಬಳ್ಳಾರಿ ಇವರ ಹೆಚ್ಚುವರಿ ಮನೆ ಬಾಡಿಗೆ ಆಡಿಟ್ ವಸೂಲಾತಿ ಜಮ	30375.00

7	ಪ್ರೊ.ಎ.ವಿ.ನಾವಡ ಇವರ ಹೆಚ್ಚುವರಿ ಮನೆ ಬಾಡಿಗೆ ಆಡಿಟ್ ವಸೂಲಾತಿ ಜಮ	13135.00
8	ಜಿ.ಕೆ. ಶಂಕರ್ ಇವರ ಆಡಿಟ್ ಆಕ್ಷೇಪಣೆಯಂತೆ ಶುಲ್ಕ ವಸೂಲಿ	13457.00
9	ವಸತಿಗೃಹ ಬಾಡಿಗೆ	45363.00
10	ದಿ॥ ಹರಿಶ್ಚಂದ್ರ ದಿಗ್ಸಂಗೀಕರ ಇವರ ಹೆಚ್ಚುವರಿ ಮನೆ ಬಾಡಿಗೆ ಆಡಿಟ್ ವಸೂಲಾತಿ ಜಮ	44069.00
11	ಹಬ್ಬದ ಮುಂಗಡ ಮರುಪಾವತಿ	6500.00
12	ಪ್ರತಿನಿಯೋಜಿತ ಸಿಬ್ಬಂದಿಗಳ ಸ್ವೀಕೃತಿ ಮೊತ್ತ	471483.00
13	ಡಾ.ಕರೀಗೌಡ ಇವರ ಜಿಐಎಸ್ ಮೊತ್ತ	24495.00
14	ಉಳಿತಾಯ ಖಾತೆ ಬಡ್ಡಿ	15549.00
	ಒಟ್ಟು ಮೊತ್ತ	**121228450.39**
II.	**ನಿವೃತ್ತಿ ವೇತನ ಖಾತೆ**	
1	ಸಿಬ್ಬಂದಿಗಳ ನಿವೃತ್ತಿ ವೇತನ ವಂತಿಗೆ	6059778.00
2	ಸಿಬ್ಬಂದಿಗಳ ವೇತನ ಕಡಿತ ನಿವೃತ್ತಿ ವೇತನ ವಂತಿಗೆ	33045.00
3	ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಿಂದ ಬಂದ ನಿವೃತ್ತಿ ವಂತಿಗೆ/ರಜಾ ವೇತನ ವಂತಿಗೆ	228910.00
4	ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರಿನಿಂದ ಬಂದ ನಿವೃತ್ತಿ ವಂತಿಗೆ/ರಜಾ ವೇತನ ವಂತಿಗೆ	194499.00
5	ಜಾನಪದ ವಿಶ್ವವಿದ್ಯಾಲಯದಿಂದ ಬಂದ ನಿವೃತ್ತಿ ವಂತಿಗೆ/ರಜಾ ವೇತನ ವಂತಿಗೆ	410387.00
6	ಪ್ರತಿನಿಯೋಜಿತ ಸಿಬ್ಬಂದಿಗಳ ಸ್ವೀಕೃತಿ ಮೊತ್ತ	26600.00
7	ಸಾವಧಿ ಠೇವಣಿ/ಉಳಿತಾಯ ಖಾತೆಯಿಂದ ಬಂದ ಬಡ್ಡಿ	1703217.93
	ಒಟ್ಟು ಮೊತ್ತ	**8656436.93**
III.	**ಪ್ರಸಾರಾಂಗ**	
1	ಪುಸ್ತಕ ಮತ್ತು ನಿಯತಕಾಲಿಕೆಗಳ ಮಾರಾಟ	1871863.00
2	ಬೆಂಗಳೂರು ಕಚೇರಿ: ಪುಸ್ತಕ ಮತ್ತು ನಿಯತಕಾಲಿಕೆಗಳ ಮಾರಾಟ	591557.00
3	ಉಳಿತಾಯ ಖಾತೆ ಬಡ್ಡಿ	25079.59
4	ಸಾವಧಿ ಠೇವಣಿಯಿಂದ ಬಂದ ಬಡ್ಡಿ	31897.57
	ಒಟ್ಟು ಮೊತ್ತ	**2520397.16**
IV	**ದೂರಶಿಕ್ಷಣ**	
1	ಇಗ್ನೊ ಅನುದಾನ	1008000.00
2	ದೂರಶಿಕ್ಷಣ ಕೇಂದ್ರ ನಗದು/ಡಿ.ಡಿ/ಚೆಕ್‌ಗಳ ಮೂಲಕ ವಿದ್ಯಾರ್ಥಿಗಳ ಶುಲ್ಕ ಜಮೆ	14117652.00
3	ಉಳಿತಾಯ ಖಾತೆ ಬಡ್ಡಿ	510098.19
	ಒಟ್ಟು ಮೊತ್ತ	**15635750.19**
V.	**ಶಿಷ್ಯವೇತನ (ಫೆಲೋಷಿಪ್) ಅನುದಾನ**	
1	ತಾಲೂಕು ಸಮಾಜ ಕಲ್ಯಾಣ ಇಲಾಖೆ, ಹೊಸಪೇಟೆ	1130973.00
2	ನಗರ ಸಭೆ, ಹೊಸಪೇಟೆ	26000.00
3	ಸಮಾಜ ಕಲ್ಯಾಣ ಇಲಾಖೆ, ಯಲಬುರ್ಗಾ	7500.00
4	ಹಿಂದುಳಿದ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬಳ್ಳಾರಿ	1777864.00

5	ಮಹಾನಗರಪಾಲಿಕೆ, ದಾವಣಗೆರೆ	20000.00
6	ಸಮಾಜ ಕಲ್ಯಾಣ ಇಲಾಖೆ, ಕೂಡ್ಲಿಗಿ	45000.00
7	ಮುಖ್ಯಾಧಿಕಾರಿಗಳು ಪಟ್ಟಣಪಂಚಾಯಿತಿ, ಚಿಂಚೋಳಿ	20000.00
8	ಪಟ್ಟಣ ಪಂಚಾಯಿತಿ, ಕಮಲಾಪುರ	44600.00
9	ಮುಖ್ಯಾಧಿಕಾರಿಗಳು ಪುರಸಭೆ, ಕಂಪ್ಲಿ	127000.00
10	ತಾಲೂಕು ಪಂಚಾಯಿತಿ, ಸಿಂಧನೂರು	3851.00
11	ತಾಲೂಕು ಸಮಾಜ ಕಲ್ಯಾಣ ಇಲಾಖೆ, ಸಿರುಗುಪ್ಪ	22500.00
12	ಶ್ರೀಕ್ಷೇತ್ರ ಧರ್ಮಸ್ಥಳದಿಂದ ಬಂದ ವಿದ್ಯಾರ್ಥಿಸಹಾಯಧನ	25000.00
13	ಕರ್ನಾಟಕ ರಾಜ್ಯ ಸಹಕಾರಿ ಮಂ. ಬೆಂಗಳೂರು	20000.00
14	ಯುಜಿಸಿ ಅನುದಾನ	200000.00
15	ಉಳಿತಾಯ ಖಾತೆ ಬಡ್ಡಿ	403437.00
	ಒಟ್ಟು ಮೊತ್ತ	**3873725.00**
VI.	**ದತ್ತಿನಿಧಿ**	
1	ಉಳಿತಾಯ ಖಾತೆ ಬಡ್ಡಿ	24777.97
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	142143.40
3	ಟಿಡಿಎಸ್ ಮರುಜಮ	12765.00
4	ಮುಂಗಡದಲ್ಲಿ ಉಳಿದ ಮೊತ್ತ	14137.00
	ಒಟ್ಟು ಮೊತ್ತ	**193823.37**
1	ಡಿ.ಎಲ್.ನರಸಿಂಹಚಾರ್ ದತ್ತಿನಿಧಿ ಉಳಿತಾಯ ಖಾತೆ ಬಡ್ಡಿ	3603.00
2	ಸಾವಧಿ ಠೇವಣಿ ಬಡ್ಡಿ	36200.00
	ಒಟ್ಟು ಮೊತ್ತ	**39803.00**
	ಒಟ್ಟು ಮಹಾ ಮೊತ್ತ	**233626.37**
VII.	**ಪೀಠಗಳು**	
1	ದೇವರದಾಸಿಮಯ್ಯ ಅ.ಪೀಠ ಉಳಿತಾಯ ಖಾತೆ ಬಡ್ಡಿ	37577.00
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	213895.47
3	ಟಿಡಿಎಸ್ ಮರುಜಮ	32370.00
	ಒಟ್ಟು ಮೊತ್ತ	**283842.47**
1	ಹಾಲುಮತ ಅ.ಪೀಠ ಉಳಿತಾಯ ಖಾತೆ ಬಡ್ಡಿ	16331.00
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	240481.10
3	ಟಿಡಿಎಸ್ ಮರುಜಮ	34650.00
4	ಮುಂಗಡದಲ್ಲಿ ಉಳಿದ ಮೊತ್ತ	1000.00
	ಒಟ್ಟು ಮೊತ್ತ	**292462.10**
1	ಲೋಹಿಯಾ ಅ.ಪೀಠ ಉಳಿತಾಯ ಖಾತೆ ಬಡ್ಡಿ	7565.73
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	76373.93
3	ಟಿಡಿಎಸ್ ಮರುಜಮ	10170.00
	ಒಟ್ಟು ಮೊತ್ತ	**94109.66**
1	ಪುರಂದರದಾಸ ಅ.ಪೀಠ ಉಳಿತಾಯ ಖಾತೆ ಬಡ್ಡಿ	6995.94
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	91248.59
3	ಟಿಡಿಎಸ್ ಮರುಜಮ	9870.00

4	ಮುಂಗಡದಲ್ಲಿ ಉಳಿದ ಮೊತ್ತ	5325.00
	ಒಟ್ಟು ಮೊತ್ತ	**113439.53**
1	ಡಾ. ರಾಜಕುಮಾರ್ ಅ.ಪೀಠ ಉಳಿತಾಯ ಖಾತೆ ಬಡ್ಡಿ	21048.00
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	116588.88
3	ಟಿಡಿಎಸ್ ಮರುಜಮ	25870.00
4	ಮುಂಗಡದಲ್ಲಿ ಉಳಿದ ಮೊತ್ತ	9533.00
	ಒಟ್ಟು ಮೊತ್ತ	**173039.88**
1	ವಾಲ್ಮೀಕಿ ಅ.ಪೀಠ ಉಳಿತಾಯ ಖಾತೆ ಬಡ್ಡಿ	6514.86
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	114897.52
3	ಟಿಡಿಎಸ್ ಮರುಜಮ	22810.00
4	ಮುಂಗಡದಲ್ಲಿ ಉಳಿದ ಮೊತ್ತ	4912.00
	ಒಟ್ಟು ಮೊತ್ತ	**149134.38**
1	ಜೈನ ಸಂಸ್ಕೃತಿ ಅ.ಪೀಠ ಉಳಿತಾಯ ಖಾತೆ ಬಡ್ಡಿ	12780.79
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	79360.77
3	ಟಿಡಿಎಸ್ ಮರುಜಮ	4890.00
4	ಸಾಲದ ಕಂತು	7500.00
	ಒಟ್ಟು ಮೊತ್ತ	**104531.56**
1.	ಹೆಚ್.ಕೆ.ಡಿ.ಬಿ. ಅ.ಪೀಠ ಉಳಿತಾಯ ಖಾತೆ ಬಡ್ಡಿ	19882.36
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	79754.55
3	ಟಿಡಿಎಸ್ ಮರುಜಮ	18220.00
4	ಮುಂಗಡದಲ್ಲಿ ಉಳಿದ ಮೊತ್ತ	11519.00
	ಒಟ್ಟು ಮೊತ್ತ	**129375.91**
1	ಶಂಬಾಜೋಶಿ ಅ.ಪೀಠ ಉಳಿತಾಯ ಖಾತೆ ಬಡ್ಡಿ	29631.07
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	81201.14
3	ಟಿಡಿಎಸ್ ಮರುಜಮ	13070.00
4	ಮುಂಗಡದಲ್ಲಿ ಉಳಿದ ಮೊತ್ತ	16107.00
	ಒಟ್ಟು ಮೊತ್ತ	**140009.21**
1	ದಲಿತ ಅ.ಪೀಠ ಉಳಿತಾಯ ಖಾತೆ ಬಡ್ಡಿ	10882.89
2	ಸಾವಧಿ ಠೇವಣಿಯಿಂದ ಬಂದ ಬಡ್ಡಿ	74047.37
3	ಟಿಡಿಎಸ್ ಮರುಜಮ	10240.00
4	ಮುಂಗಡದಲ್ಲಿ ಉಳಿದ ಮೊತ್ತ	10090.00
	ಒಟ್ಟು ಮೊತ್ತ	**105260.26**
	ಒಟ್ಟು ಮೊತ್ತ	**1585204.96**
VIII. ಗಿರಿಜನ ಉಪ ಯೋಜನೆ		
1	ಉಳಿತಾಯ ಖಾತೆಯಿಂದ ಬಂದ ಬಡ್ಡಿ	378794.00
2	ಮುಂಗಡದಲ್ಲಿ ಉಳಿದ ಮೊತ್ತ	518462.00
3	ಅನುದಾನ	4100000.00
	ಒಟ್ಟು ಮೊತ್ತ	**4997256.00**

IX.	**ಚಿತ್ರಕಲೆ ವಿದ್ಯಾಲಯಗಳ ನಿರ್ವಹಣಾ ಕೇಂದ್ರ**	
1	ಶುಲ್ಕ	2886293.00
2	ಅನುದಾನ	15400000.00
3	ಉಳಿತಾಯ ಖಾತೆ ಬಡ್ಡಿ	149562.00
	ಒಟ್ಟು ಮೊತ್ತ	**18435855.00**
X.	**ವಿಶೇಷ ಘಟಕ ಯೋಜನೆ**	
1	ಮುಂಗಡದಲ್ಲಿ ಉಳಿದ ಮೊತ್ತ	78788.00
2	ಉಳಿತಾಯ ಖಾತೆ ಬಡ್ಡಿ	570916.00
3	ಅನುದಾನ ಮೊತ್ತ	10600000.00
4	ಸ್ವೀಕೃತಿ ಮೊತ್ತ (5169)	172600.00
	ಒಟ್ಟು ಮೊತ್ತ	**11422304.00**
XI.	**ಯುಜಿಸಿ**	
1	ಯುಜಿಸಿ ಅನುದಾನ	37393547.00
2	ಯುಜಿಸಿ ಖಾತೆಯಿಂದ ಬಂದ ಬಡ್ಡಿ	1162176.64
3	ಟಿಡಿಎಸ್ ಮರು ಜಮ	63588.00
4	ಡಾ. ಮೊಗಳ್ಳಿ ಗಣೇಶ್	300860.00
5	ಡಾ. ಬಿ.ಎಂ.ಪುಟ್ಟಯ್ಯ	477600.00
6	AIU ರಿಯಾಯಿತಿ ಮೊತ್ತ	1000.00
	ಒಟ್ಟು ಮೊತ್ತ	**39398771.64**
XII.	**ವಿದ್ಯಾರ್ಥಿಗಳಿಂದ ಹಾಗೂ ಇತರೆ ಶುಲ್ಕದಿಂದ ಬಂದ ಆದಾಯ ಯೋಜನೆ**	
I	ಅಭಿವೃದ್ಧಿ(ಸಹಾಯಾನುದಾನ) ಅನುದಾನ	52000000.00
1	ಪಿಎಚ್‌ಡಿ ಅರ್ಧ ವಾರ್ಷಿಕ ಶುಲ್ಕ	1316850.00
2	ಪಿಎಚ್‌ಡಿ ನೋಂದಣಿ/ಬೋಧನಾ ಶುಲ್ಕ	794770.00
3	ಪಿಎಚ್‌ಡಿ ಪ್ರಬಂಧ/ಅಂಕಪಟ್ಟಿ ಶುಲ್ಕ	122550.00
4	ಪಿಎಚ್‌ಡಿ ಸಾರಲೇಖ/ಪ್ರಕಟಣೆ ಶುಲ್ಕ	26500.00
5	ಪಿಎಚ್‌ಡಿ ಮಹಾಪ್ರಬಂಧ ಸಲ್ಲಿಕೆ/ದಂಡ ಶುಲ್ಕ	120636.00
6	ಪಿಎಚ್‌ಡಿ ಅವಧಿ/ಕಮ್ಮಟ ವಿಸ್ತರಣೆ ಶುಲ್ಕ	104250.00
7	ಪಿಎಚ್‌ಡಿ ಪರೀಕ್ಷಾ / ಪ್ರವೇಶ ಶುಲ್ಕ	7500.00
8	ಪಿ.ಎಚ್.ಡಿ ಮೌಲ್ಯಮಾಪನ ವರದಿ ಶುಲ್ಕ	14600.00
9	ಎಂ.ಎ ಪಿಎಚ್‌ಡಿ ನೋಂದಣಿ ಶುಲ್ಕ	6125.00
10	ಎಂ.ಎ ಪಿಎಚ್.ಡಿ, ಅರ್ಜಿ/ಅರ್ಧವಾರ್ಷಿಕ ಶುಲ್ಕ	344925.00
11	ಎಂ.ಎ ಪಿಎಚ್.ಡಿ, ಪಿಎಚ್‌ಡಿ ಪ್ರವೇಶ ಶುಲ್ಕ	62250.00
12	ಎಂ.ಎ ಪಿಎಚ್.ಡಿ, ಪರೀಕ್ಷಾ ಶುಲ್ಕ	15477.00
13	ಎಂ.ಎ/ಪಿಎಚ್‌ಡಿ 6ನೇ ಸೆಮಿಸ್ಟರ್ ಶುಲ್ಕ	19008.00
14	ಎಂ.ಎ/ಪಿಎಚ್‌ಡಿ 2ನೇ ಸೆಮಿಸ್ಟರ್ ಶುಲ್ಕ	54970.00
15	ಎಂ.ಎ/ಪಿಎಚ್‌ಡಿ 4ನೇ ಸೆಮಿಸ್ಟರ್ ಶುಲ್ಕ	13742.00
16	ಎಂ.ಫಿಲ್ ಮರು ಪರೀಕ್ಷೆ ಶುಲ್ಕ	24400.00
17	ಎಂ.ಫಿಲ್ ಅರ್ಜಿ/ ಪ್ರವೇಶ ಶುಲ್ಕ	86150.00
18	ಎಂ.ಫಿಲ್ ಪ್ರಬಂಧ ಶುಲ್ಕ	15500.00

19	ಎಂ.ಫಿಲ್ ಘಟಿಕೋತ್ಸವ ಶುಲ್ಕ	4250.00
20	ಎಂ.ಫಿಲ್ ಅರ್ಧವಾರ್ಷಿಕ ಶುಲ್ಕ	2100.00
21	ನೈಜ ತೆರ್ಗಡೆ ಪ್ರಮಾಣ ಪತ್ರ ಶುಲ್ಕ	33430.00
22	ಡಿಲಿಟ್ ಮಹಾಪ್ರಬಂಧ ಶುಲ್ಕ	22500.00
23	ಎಂ.ವಿ.ಎ ಪ್ರಮಾಣ ಪತ್ರ ಶುಲ್ಕ	5600.00
24	ಎಂ.ವಿ.ಎ ದಂಡ ಶುಲ್ಕ	800.00
25	ಎಂ.ವಿ.ಎ 4ನೇ ಸೆಮಿಸ್ಟರ್ ಶುಲ್ಕ	17025.00
26	ಎಂ.ವಿಎ. ಅರ್ಜಿ/ಪ್ರವೇಶ ಶುಲ್ಕ	37050.00
27	ಬಿ.ಮ್ಯೂಸಿಕ್ ಪರೀಕ್ಷಾ/ ಬೋದನಾ ಶುಲ್ಕ	15109.00
28	ಎಂ.ಮ್ಯೂಸಿಕ್ ಪರೀಕ್ಷಾ /ಬೋಧನಾ ಶುಲ್ಕ	57131.00
29	ಫೌಂಡೇಷನ್ ದ್ವಿತೀಯ ಅಂಕಪಟ್ಟಿ ಶುಲ್ಕ	5200.00
30	ಡಿ.ಎಂ.ಎಲ್ ದ್ವಿತೀಯ ಅಂಕಪಟ್ಟಿ ಶುಲ್ಕ	2800.00
31	ಮಹಿಳಾ ಅಧ್ಯಯನ ಕೇಂದ್ರದ ಅರ್ಜಿ ಶುಲ್ಕ	12000.00
32	ಚಿತ್ರಕಲಾ ಕೃತಿಗಳ ಮಾರಾಟ	3000.00
33	ಅಂಚೆ ಶುಲ್ಕ	300.00
34	ಸಂಲಗ್ನತೆ ಶುಲ್ಕ	29800.00
35	ವಸತಿ ಗೃಹದ ಠೇವಣಿ	0.00
36	ಘಟಿಕೋತ್ಸವ ಶುಲ್ಕ	172625.00
37	ಮಾನ್ಯತೆ ನವೀಕರಣ/ಪರಿಶೀಲನಾ ಶುಲ್ಕ	111000.00
38	ವಸತಿ ಗೃಹದ ಬಾಡಿಗೆ	70003.00
39	ಎಂ.ಹೆಚ್.ಆರ್.ಡಿ. ಡಾಟಾ ಶುಲ್ಕ	65025.00
40	ಶ್ರೀಶೈಲ ಅತಿಥಿಗೃಹದ ಬಾಡಿಗೆ	117908.00
41	ಯುಟಿಲಿಟಿ ಕಟ್ಟಡ ಬಾಡಿಗೆ	8400.00
42	ಉಪಾಹಾರ ಮಂದಿರ ಬಾಡಿಗೆ	13000.00
43	ವಿದ್ಯುತ್ ಸುಡ್ತಿ	8431.00
44	ಟೆಂಡರ್ ಶುಲ್ಕ	58100.00
45	ಮಾಹಿತಿಹಕ್ಕು ಅರ್ಜಿ ಶುಲ್ಕ	770.00
46	ಪಂಪಸಭಾಂಗಣ ಬಾಡಿಗೆ	2000.00
47	ಗ್ರಂಥಾಲಯದ ವಿಳಂಬಿತ ದಂಡ	36341.00
48	ಗ್ರಂಥಾಲಯ ಶುಲ್ಕ	500.00
49	ಭುವನ ವಿಜಯದ ಬಾಡಿಗೆ	4800.00
50	ಮುಂಗಡದಲ್ಲಿ ಉಳಿದ ಮೊತ್ತ	794485.00
51	ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು: ಕಮ್ಮಟಕ್ಕಾಗಿ ಶುಲ್ಕ	60000.00
52	ಬಿಎಸ್.ಎನ್.ಎಲ್ ಟವರ್‌ನ ವಿದ್ಯುತ್ ಸುಡ್ತಿ	95547.00
53	ಉಳಿತಾಯ ಖಾತೆಯಿಂದ ಬಂದ ಬಡ್ಡಿ	24437.00
54	ಮಾನ್ಯ ಕುಲಪತಿಗಳು ವಿವಿ ವಾಹನ ಬಳಿಸಿದ ಬಾಬ್ತು	3000.00
55	ಆವರಣದಲ್ಲಿ ಕುರಿ ಮೇಯಿಸಿದ ಶುಲ್ಕ	3400.00
56	ಗುತ್ತಿಗೆದಾರರ ನವೀಕರಣ/ನೋಂದಣಿ ಶುಲ್ಕ	20000.00
57	ಸಾಮಾನ್ಯ ಖಾತೆ ಉಳಿತಾಯ ಖಾತೆಯಿಂದ ಬಂದ ಬಡ್ಡಿ	480857.00

58	ಜಿ.ಕೆ. ಶಂಕರ ಅವರ ಆಡಿಟ್ ಆಕ್ಷೇಪಣೆ ಮೊತ್ತ	7146.00
59	ಸಾಮಾನ್ಯ ಖಾತೆ 5169 ಯಿಂದ ಎಸ್‌ಟಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಪಾವತಿಸಿದ ಮೊತ್ತವನ್ನು ವಿಶೇಷ ಘಟಕಕ್ಕೆ ವಾಪಸ್ಸು ಹಾಕಲಾಗಿದೆ.	1278.00
60	ಪ್ರತಿನಿಯೋಜಿತ ಸಿಬ್ಬಂದಿಗಳ ಸ್ವೀಕೃತಿ ಮೊತ್ತ	29961.00
61	ಆರ್ಥಿಕ ನೆರವು	32000.00
62	6 ಉಳಿತಾಯ ಖಾತೆಗಳನ್ನು ಮುಕ್ತಾಯಗೊಳಿಸಿದ ಒಟ್ಟು ಮೊತ್ತ ನಗದು ಬ್ಯಾಂಕ್‌ಗೆ ಜಮ	13430.19
	ಒಟ್ಟು ಮೊತ್ತ	**57632742.19**
XIII	**ಇತರೆ**	
1	ಠೇವಣಿ ಖಾತೆ ಇಎಂಡಿ/ಎಫ್‌ಎಸ್‌ಡಿ	865852.00
